## ಅಧ್ಯಾಯ 8

# ಮಾನವರ ಹೊಸ ಆರಂಭ

ನಾವೆಯೊಳಗಿನ ಪ್ರಯಾಣಿಕರು ಏನು ತಿನ್ನುತ್ತಿದ್ದರು ಅಥವಾ ಮಲಗಿದರು ಅಥವಾ ತಮ್ಮ ದಿನಗಳನ್ನು ಹೇಗೆ ಕಳೆದರು ಎಂಬುದರ ಬಗ್ಗೆ ಬೈಬಲ್ ಏನನ್ನೂ ಹೇಳುವದಿಲ್ಲ. ದೇವರು ಲೋಕದಲ್ಲಿನ ಪಾಪಭರಿತ ನಿವಾಸಿಗಳನ್ನೆಲ್ಲಾ ನಾಶಗೊಳಿಸಿ ಅದನ್ನು ಶುದ್ಧಗೊಳಿಸುತ್ತಿರುವ ವೇಳೆಯಲ್ಲಿ ನೋಹನ ಕುಟುಂಬವು ಅನೇಕ ತಿಂಗಳುಗಳ ವರೆಗೆ ಅನುಭವಿಸಿದ ದೃಶ್ಯಗಳು, ಶಬ್ದಗಳು, ಅಥವಾ ವಾಸನೆಗಳ ಬಗ್ಗೆಯಾಗಲಿ ಅದು ಯಾವ ಬಣ್ಣನೆಯನ್ನು ಮಾಡುವದಿಲ್ಲ. ದೇವರು ಸಂರಕ್ಷಿಸುತ್ತಿದ್ದಂಥ ಪ್ರಾಣಿಗಳ ಸಮೇತವಾಗಿ ನಾವೆಯಲ್ಲಿದ್ದ ಎಂಟು ಮಂದಿ ಪ್ರಯಾಣಿಕರಿಗೆ ತಮ್ಮನ್ನು ದೇವರು ಮರೆತು ಬಿಟ್ಟನೋ ಎಂಬ ಚಕಿತವುಂಟಾಗಿರಬಹುದು.

8ನೇ ಅಧ್ಯಾಯವು ನಾವೆಯಲ್ಲಿ ನೋಹನ ಕುಟುಂಬವನ್ನು ಮತ್ತು ಸಕಲ ಪ್ರಾಣಿಗಳನ್ನು ದೇವರು "ನೆನಪಿಗೆ ತಂದುಕೊಂಡನು" ಎಂದು ಹೇಳುತ್ತದೆ. ಆತನು ಪ್ರಳಯದ ನೀರು ಕಡಿಮೆಯಾಗುವಂತೆ (8:1–5) ಮತ್ತು ಭೂಮಿಯ ಮೇಲ್ಭಾಗವು ಒಣಗಿ ಹೋಗುವಂತೆ ಮಾಡಿದನು (8:6–14). ದೇವರು ಆಜ್ಞಾಪಿಸಿದಾಗ, ನೋಹನ ಕುಟುಂಬ ಮತ್ತು ಎಲ್ಲಾ ಪ್ರಾಣಿಗಳು ನಾವೆಯಿಂದ ಹೊರಗೆ ಬಂದವು (8:15–19). ನೋಹನು ಒಂದು ಯಜ್ಞವನ್ನು ಅರ್ಪಿಸುವದರೊಂದಿಗೆ ಮತ್ತು ಭೂಮಿಯು ಇರುವ ತನಕವೂ ಇನ್ನೆಂದಿಗೂ ಜೀವರಾಶಿಗಳನ್ನು ನಾಶಗೊಳಿಸುವದಿಲ್ಲ ಎಂದು ದೇವರು ವಾಗ್ದಾನ ಮಾಡುವದರೊಂದಿಗೆ ಅಧ್ಯಾಯವು ಮುಕ್ತಾಯಗೊಳ್ಳುತ್ತದೆ (8:20–22).

## ಪ್ರವಾಹದ ನೀರು ತಗ್ಗುವದು (8:1-5)

**1 ತರುವಾಯ ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳನ್ನೂ ನೆನಪಿಗೆ ತಂದುಕೊಂಡು ಭೂಲೋಕದ ಮೇಲೆ ಗಾಳಿ ಬೀಸುವಂತೆ ಮಾಡಲಾಗಿ ನೀರು ತಗ್ಗಿತು. 2 ಭೂಮಿಯ ಕೆಳಗಿರುವ ಸಾಗರದ ಸೆಲೆಗಳೂ ಆಕಾಶದ ತೂಬುಗಳೂ ಮುಚ್ಚಿಹೋದವು. ಆಕಾಶದಿಂದ ಸುರಿಯುತ್ತಿದ್ದ ಮಳೆ ನಿಂತುಹೋಯಿತು. ಆಗ ಭೂಮಿಯ ಮೇಲಿದ್ದ ನೀರು ಕ್ರಮವಾಗಿ ತಗ್ಗುತ್ತಾ ಬಂತು. 3 ಹೀಗೆ ನೂರೈವತ್ತು ದಿನಗಳಾದ ಮೇಲೆ ನೀರು ಕಡಿಮೆಯಾಯಿತು. 4 ಏಳನೆಯ ತಿಂಗಳಿನ ಹದಿನೇಳನೆಯ ದಿನದಲ್ಲಿ ನಾವೆಯು ಅರಾರಾಟ್ ಸೀಮೆಯ ಬೆಟ್ಟಗಳಲ್ಲಿ ನಿಂತಿತು. 5 ಹತ್ತನೆಯ ತಿಂಗಳಿನವರೆಗೂ ನೀರು ಕಡಿಮೆ ಕಡಿಮೆಯಾಗುತ್ತಾ ಬಂತು. ಹತ್ತನೆಯ ತಿಂಗಳಿನ ಮೊದಲನೆಯ ದಿನದಲ್ಲಿ ಬೆಟ್ಟಗಳ ಶಿಖರಗಳು ಕಾಣಬಂದವು.**

**ವಚನ 1.** ನೀರು ಹೆಚ್ಚಾಗುತ್ತಾ 150 ದಿನಗಳ ಕಾಲ ಪ್ರಬಲಗೊಂಡಿತ್ತು (7:24) ಎಂದು ಹೇಳಿದ ನಂತರದಲ್ಲಿ, ಕಥಾನಿರೂಪಕನು ಹೇಳಿದ್ದೇನೆಂದರೆ **ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳನ್ನೂ ನೆನಪಿಗೆ ತಂದುಕೊಂಡನು.** "ದೇವರು

ನೆನಪಿಗೆ ತಂದುಕೊಂಡನು" ಎಂಬ ಮಾತು ನಾವೆಯಲ್ಲಿದ್ದವರನ್ನಾಗಲಿ ಅಥವಾ ತಾನು ಅವರಿಗೆ ನೀಡಿದ ಆಜ್ಞೆಗಳನ್ನಾಗಲಿ ಯೆಹೋವನು ಮರೆತು ಹೋಗಿದ್ದನು ಎಂಬ ಸೂಚ್ಯಾರ್ಥವನ್ನು ಕೊಡುವದಿಲ್ಲ. ದೇವರಲ್ಲಿ ಒಂದು ವಿಧವಾಗಿ ಮನಸ್ಸಿಗೆ ಹೊಳೆಯಿತು ಎಂಬ ಅಭಿಪ್ರಾಯಕ್ಕೆ ವಿರುದ್ಧವಾಗಿ, "ನೆನಪಿಗೆ ತಂದುಕೊಂಡನು" (זָכַר, *ಝಾಕಾರ)* ಎಂಬ ಪದವು ನಾವೆಯಲ್ಲಿ ಬಹಳ ಕಾಲದಿಂದ ಬಂಧಿಯಾಗಿದ್ದಂಥ "ನೋಹನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳ" ಪರವಾಗಿಯೂ ಕ್ರಿಯೆ ಮಾಡುವಂತೆ ಯೆಹೋವನನ್ನು ನಡಿಸಿದ ದೈವಿಕ ಕಾಳಜಿಯನ್ನು ಕುರಿತು ಒತ್ತಿ ಹೇಳುತ್ತದೆ.[1] ಅದು ಅನೇಕ ಸಾರಿ ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳಿಗೆ ಯಾವಾಗಲೂ ನಂಬಿಗಸ್ತನಾಗಿರುತ್ತಾನೆ ಎಂಬುದನ್ನು ತೋರಿಸಿ ಕೊಡುತ್ತದೆ (9:14-16; 19:29; 30:22; ವಿಮೋಚನಕಾಂಡ 2:24; 6:5; 32:13; ಯಾಜಕಕಾಂಡ 26:42, 45; ಅರಣ್ಯಕಾಂಡ 10:9).

ದೇವರು **ಭೂಲೋಕದ ಮೇಲೆ ಗಾಳಿ ಬೀಸುವಂತೆ** ಮಾಡುವ ಮೂಲಕ ನಾವೆಯಲ್ಲಿದ್ದವರ ಪರವಾಗಿ ತನ್ನ ಕೆಲಸವನ್ನು ಆರಂಭಿಸಿದ್ದನು, ಅದರ ಫಲಿತವಾಗಿ **ನೀರು ತಗ್ಗಿತು**. "ಗಾಳಿ" ಎಂಬುದಕ್ಕಿರುವ ಪದವು רוּחַ *(ರೂವಾಚ)* ಎಂಬುದು, ಇದು 1:2ರಲ್ಲಿ ಸೃಷ್ಟಿಯ ಕಾರ್ಯದಲ್ಲಿ "ಆದಿಸಾಗರದ ಮೇಲೆ ಚಲಿಸುತ್ತಿದ್ದ" ದೇವರ "ಆತ್ಮ"ನನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ವಾಸ್ತವಿಕದಲ್ಲಿ, ಆದಿಕಾಂಡ 8ನೇ ಅಧ್ಯಾಯದಲ್ಲಿನ ಹಲವಾರು ಪದಗಳು ಆದಿಕಾಂಡ 1ನೇ ಅಧ್ಯಾಯದೊಳಗಿಂದ ಪುನರಾವರ್ತಿಸಲ್ಪಟ್ಟಿರುತ್ತವೆ. Kenneth A. Mathewsನು ಅಭಿಪ್ರಾಯ ಪಟ್ಟದ್ದೇನೆಂದರೆ ಈ ಪುನರಾವರ್ತನೆಯು "ದೇವರು ಒಂದು ಹೊಸ ಸೃಷ್ಟಿಯನ್ನು ಮಾಡುವದಕ್ಕೆ ಮುಂದಾಗಿದ್ದಾನೆ"[2] ಎಂಬುದನ್ನು ತೋರಿಸಿ ಕೊಡುತ್ತದೆ. ಹೇಗೂ, ಈ ಸನ್ನಿವೇಶದಲ್ಲಿ *ರೂವಾಚ್* ಎಂಬುದು ಸ್ಪಷ್ಟವಾಗಿ ಪ್ರಳಯದ ನೀರನ್ನು ಒಣಗಿಸುವದಕ್ಕಾಗಿ ದೇವರು ಕಳುಹಿಸಿ ಕೊಟ್ಟ ನಿಜವಾದ ಗಾಳಿಯನ್ನು ಸೂಚಿಸುತ್ತದೆ. ಇದೇ ರೀತಿಯಲ್ಲಿಯೇ, ವಿಮೋಚನಯಾತ್ರೆಯ ವೇಳೆ, ದೇವರು ಕೆಂಪು ಸಮುದ್ರದ ನೀರನ್ನು ಇಬ್ಭಾಗಿಸಿ ಇಸ್ರಾಯೇಲ್ಯರು "ಒಣನೆಲದಲ್ಲಿ" ನಡೆದುಕೊಂಡು ಹೋಗುವಂತಾಗಲು ನೆಲವನ್ನು ಒಣಗಿಸುವದಕ್ಕೆ ಗಾಳಿಯನ್ನು ಕಳುಹಿಸಿದ್ದನು (ವಿಮೋಚನಕಾಂಡ 14:21, 22).

**ವಚನ 2.** ಗಾಳಿಯನ್ನು ಕಳುಹಿಸುವದರ ಜೊತೆಗೆ, ದೇವರು ಭೂಗರ್ಭದಲ್ಲಿನ ಜಲಸಮೂಹಗಳು ಹೊರಗೆ ಚಿಮ್ಮಿ ಬರದಂತೆ ದೇವರು **ಭೂಮಿಯ ಕೆಳಗಿರುವ ಸಾಗರದ ಸೆಲೆಗಳೂ** ಮುಚ್ಚಿ ಹೋಗುವಂತೆ ಸಹ ಮಾಡಿದನು. ಆತನು **ಮಳೆಯನ್ನು** ತಡೆಯುವದಕ್ಕಾಗಿ **ಆಕಾಶದ ತೂಬುಗಳನ್ನು ಮುಚ್ಚಿಹೋಗುವಂತೆ** ಮಾಡಿದನು. 2ನೇ ವಚನದಲ್ಲಿನ ಕ್ರಿಯಾಪದಗಳಾದ "ಮುಚ್ಚಿಹೋದವು" ಮತ್ತು "ನಿಂತು ಹೋಯಿತು" ಎಂಬವುಗಳೆರಡೂ ಕರ್ಮಣಿ ಕ್ರಿಯಾರೂಪದಲ್ಲಿರುತ್ತವೆ, ಇದು ನೀರನ್ನು ನಿಲ್ಲಿಸುವದು ಸ್ವಾಭಾವಿಕವಾಗಿ ಅಥವಾ ಆಕಸ್ಮಿಕವಾಗಿ ನಡೆದ ಸಂಗತಿಯಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಈ ಪದಗಳು ನೀರಿನ ವಿವಿಧ ಹೆಚ್ಚುವರಿ ಮೂಲಗಳನ್ನು ಮುಚ್ಚುವದರಲ್ಲಿ ದೈವಿಕ ಚಟುವಟಿಕೆಯನ್ನು ಪ್ರತಿಫಲಿಸುತ್ತವೆ. ಈ ವಚನವು 7:11, 12ರಲ್ಲಿನ ದೇವರ ಕೆಲಸದ ಪೂರ್ತಿ ಬದಲಾಯಿಸುವಿಕೆಯನ್ನೂ ಸೂಚಿಸುತ್ತದೆ.

**ವಚನ 3. ಆಗ ಭೂಮಿಯ ಮೇಲಿದ್ದ ನೀರು ಕ್ರಮವಾಗಿ ತಗ್ಗುತ್ತಾ ಬಂತು** ಮತ್ತು **ಕಡಿಮೆಯಾಯಿತು** ಎಂಬ ಹೇಳಿಕೆ ಸಹ 7:17-24ರಲ್ಲಿ ಬರೆಯಲ್ಪಟ್ಟಿರುವ ಘಟನೆಯ ಸಂಪೂರ್ಣ ಬದಲಾವಣೆ ಆಗಿರುತ್ತದೆ, ಅಲ್ಲಿ ನೀರು ಭೂಮಿಯ ಮೇಲೆ "ಬಲು ಹೆಚ್ಚಲು" ಮತ್ತು "ಅತ್ಯಧಿಕವಾಗಿ ಪ್ರಬಲ" ಆಯಿತು ಎಂದು ಹೇಳಲಾಗಿರುತ್ತದೆ. ಇಸ್ರಾಯೇಲ್ಯರು ಕೆಂಪು

ಸಮುದ್ರವನ್ನ ಹಾಯ್ದು ದಾಟಿದ ಬಳಿಕ ಅದು ಪುನಃ ತನ್ನ ಮೊದಲಿನ ಸ್ಥಿತಿಗೆ ಹಿಂದಿರುಗಿದ ಸಂದರ್ಭದಲ್ಲಿ ಸಹ ಇದೇ ವಿಧವಾದ ಬಣ್ಣನೆಯು ಕಂಡು ಬರುತ್ತದೆ (ವಿಮೋಚನಕಾಂಡ 14:26-28), ಮತ್ತು ಇಸ್ರಾಯೇಲ್ಯರು ಯೋರ್ದಾನ್ ನದಿಯನ್ನು ದಾಟಿದ ವೇಳೆ ಇದೇ ವಿಧವಾದ ಘಟನೆಯು ಸಂಭವಿಸಿತು (ಯೆಹೋಶುವ 4:18).

ನೀರು ತಗ್ಗುವಿಕೆಯು **ನೂರೈವತ್ತು ದಿನಗಳಾದ ಮೇಲೆ** ಇಡಲ್ಪಟ್ಟಿದೆ. ಇಲ್ಲಿ ಬಳಸಿರುವ ಪರಿಭಾಷೆಯು 7:24ರಲ್ಲಿರುವಂತೆಯೇ ಇರುತ್ತದೆ, ಅದು "ಪ್ರಳಯದ ನೀರು ಭೂಮಿಯ ಮೇಲೆ ನೂರೈವತ್ತು ದಿನ ಪ್ರಬಲವಾಯಿತು" ಎಂದು ಹೇಳುತ್ತದೆ. ಪ್ರಳಯದ ಕಾಲಾನುಕ್ರಮವನ್ನು ಮರುಸೃಷ್ಟಿ ಮಾಡುವದಕ್ಕೆ ಪ್ರಯತ್ನಿಸುವವರು 7:24 ಮತ್ತು 8:3 ವಾಕ್ಯಭಾಗಗಳು ಹೇಗೆ ಒಂದಕ್ಕೊಂದು ಸಂಬಂಧ ಹೊಂದಿವೆ ಎಂಬ ವಿಷಯದಲ್ಲಿ ಸಹಮತ ವ್ಯಕ್ತಪಡಿಸುವದಿಲ್ಲ. ಕೆಲವರು 7:24ರ 150 ದಿನಗಳನ್ನು ಪ್ರಳಯವು ಪ್ರಬಲವಾಗುವದನ್ನು ಸೂಚಿಸುತ್ತವೆ ಮತ್ತು 8:3ರ 150 ದಿನಗಳು ಆ ನೀರು ಕ್ರಮೇಣ ತಗ್ಗುತ್ತಾ ಬರುವದನ್ನು ಸೂಚಿಸುತ್ತವೆ ಅರ್ಥಮಾಡಿಕೊಳ್ಳುತ್ತಾರೆ - ಒಟ್ಟು 300 ದಿನಗಳು.[3] ಇದು ಸರಿಯಾದದ್ದೇ ಆಗಿರುವದಾದರೆ, 8:3ನೇ ವಚನವು ಆ ಕಾಲವಾಧಿಯಲ್ಲಿನ ನಿಜವಾದ ಘಟನೆಗಳಿಗೆ ಮುಂಚೆ ಕಾಣಿಸಿಕೊಳ್ಳುವಂಥ ಹೇಳಿಕೆಯ ಸಾರಾಂಶವಾಗಿರುತ್ತದೆ (ನೋಡಿರಿ 8:4-12). ಇನ್ನು ಕೆಲವರು 7:4 ಮತ್ತು 8:3 ವಾಕ್ಯಭಾಗಗಳಲ್ಲಿ ಅದೇ 150 ದಿನಗಳ ಕಾಲಾವಧಿಯು ಪರಿಗಣನೆಯಲ್ಲಿರುತ್ತದೆಂದು ಯೋಚಿಸುತ್ತಾರೆ.[4] ಈ ಕಾಲಾವಧಿಯ ಅಂತ್ಯದಲ್ಲಿ, ಪ್ರಳಯದ ನೀರು ತಗ್ಗುವದಕ್ಕೆ ಆರಂಭಗೊಂಡಿತು, ನೆಲದ ಮೇಲೆ ನಾವೆಯು ನಿಲ್ಲುವದಕ್ಕೆ ವೇದಿಕೆಯನ್ನು ಸಿದ್ಧಗೊಳಿಸುವದಾಗಿತ್ತು.

**ವಚನ 4. ಏಳನೆಯ ತಿಂಗಳಿನ ಹದಿನೇಳನೆಯ ದಿನದಲ್ಲಿ**, ಪ್ರಳಯವು ಆರಂಭಗೊಂಡ ಬಳಿಕ ಸರಿಯಾಗಿ ಐದು ತಿಂಗಳಾದ ಮೇಲೆ (7:11), **ನಾವೆಯು ಅರಾರಾಟ್ ಸೀಮೆಯ ಬೆಟ್ಟಗಳಲ್ಲಿ ನಿಂತಿತು**. **ನಿಂತಿತು** ಎಂಬುದಕ್ಕಿರುವ ಇಬ್ರಿಯ ಪದವು (נוּחַ, *ನೂವಾಚ್*) ಎಂಬುದು ನೋಹ (נֹחַ, *ನೊವಾಚ)* ಎಂಬ ಹೆಸರಿನಂತೆ ಅನ್ನಿಸುತ್ತದೆ (5:28, 29; 8:8, 9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಬೆಟ್ಟಗಳು" ಎಂಬುದು ಒಂದು ನಿರ್ದಿಷ್ಟವಾದ ಬೆಟ್ಟವನ್ನು ಸೂಚಿಸುವದಿಲ್ಲ, ಆದರೆ ಆ ಹೆಸರನ್ನೊಳಗೊಂಡಿರುವ ಬೆಟ್ಟಗಳ ಪ್ರಾಂತ್ಯವನ್ನು ಸೂಚಿಸುತ್ತದೆ. "ಅರಾರಾಟ್" ಎಂಬುದು "ಉರಾರ್ಟು" ಎಂಬ ಹೆಸರಿಗೆ ಸಮಾನವಾಗಿದೆ, ಇದು ಇಂದಿನ ಮೂಡಲ ಟರ್ಕಿ ಮತ್ತು ಪಾಶ್ಚಾತ್ಯ ಅರ್ಮೇನಿಯಾದಲ್ಲಿದ್ದಂಥ ಮೆಸಪೋತಾಮ್ಯದ ಕಣಿವೆಯಿಂದ (ಆಧುನಿಕ ಇರಾಕ್) ಉತ್ತರಕ್ಕಿದ್ದ ರಾಜ್ಯವೊಂದರ ಅಶ್ಶೂರ್ಯದ ಹೆಸರಾಗಿರುತ್ತದೆ. ಅಶ್ಶೂರ್ಯದ ಅರಸರು ಕ್ರಿ.ಪೂ. ಮೊದಲ ಸಹಸ್ರಮಾನದಲ್ಲಿ ಉರಾರ್ಟುವಿನ ಮೇಲೆ ಯುದ್ಧವನ್ನು ಮಾಡಿದರು, ಮತ್ತು ಈ ಪ್ರಾಂತ್ಯವು ಹಳೆಯ ಒಡಂಬಡಿಕೆಯೊಳಗೆ ಹಲವು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (2 ಅರಸು 19:37; ಯೆಶಾಯ 37:38; ಯೆರೆಮೀಯ 51:27).

ನಾವೆಯು ನಿಖರವಾಗಿ ಯಾವ ಸ್ಥಳದಲ್ಲಿ ಬಂದು ನಿಂತಿಯು ಎಂಬುದನ್ನು ಗುರುತಿಸುವದಕ್ಕಾಗಿ ಹಲವಾರು ಶೋಧನಾ ತಂಡಗಳು ಪ್ರಯತ್ನಿಸಿರುತ್ತವೆ. ಕ್ರಿ.ಶ. ಹನ್ನೊಂದನೆಯ ಮತ್ತು ಹನ್ನೆರಡನೆಯ ಶತಮಾನಗಳ ನಡುವೆ, ಒಂದು ಸಂಪ್ರದಾಯವು ಬೆಳೆದುಕೊಂಡಿತ್ತು, ಅದು ಇಂದು "ಅರಾರಟ್ ಪರ್ವತ" ಎಂದು ಗುರುತಿಸಲ್ಪಡುವ ಪರ್ವತವೇ ನೋಹನ ನಾವೆಯು ಬಂದು ನಿಂತುಕೊಂಡ ಆ ಸ್ಥಳವೆಂದು ಸಮರ್ಥಿಸುವದಾಗಿತ್ತು, ಈ ಪರ್ವತವು ಎತ್ತರದಲ್ಲಿ ಹೆಚ್ಚುಕಡಿಮೆ 17,000 ಸಾವಿರ ಅಡಿಗಳಷ್ಟಿರುತ್ತದೆ. ಕಾಲವು ಗತಿಸಿದಂತೆ, ಅಂಥ ಹೇಳಿಕೆಗಳು ಹೆಚ್ಚೆಚ್ಚು ಗೊಂದಲಕರವಾಗುತ್ತಾ ಬಂದಿರುತ್ತವೆ ಯಾಕೆಂದರೆ

ನಾವೆಯನ್ನು ಹುಡುಕುವ ಮತ್ತಷ್ಟು ಜನರು ಅದಕ್ಕೆ ಹೊಂದಾಣಿಕೆಯಾಗದಂಥ ವಾದಗಳನ್ನು ಮುಂದಿಟ್ಟಿರುತ್ತಾರೆ. ವಿವಿಧ ಗುಂಪುಗಳು ಬೇರೆ "ಅರಾರಾಟ್ ಬೆಟ್ಟ," ಮಾತ್ರವಲ್ಲದೆ ಬೇರೆ ಪರ್ವತದ ತುದಿಗಳಲ್ಲಿ ಸ್ಥಳಗಳನ್ನು ಗುರುತಿಸಿರುತ್ತಾರೆ, ಆ ಸ್ಥಳಗಳಲ್ಲಿ ಮಹಾ ಪ್ರಳಯದಲ್ಲಿ ನಾಶವಾಗದೆ ಉಳಿದಿರುವ ನಾವೆಯ ಪಳೆಯುಳಿಕೆಗಳಿರುತ್ತವೆ ಎಂದು ಅವರು ಹೇಳುತ್ತಾರೆ. ವೈರಾಗ್ಯವುಳ್ಳ ವ್ಯಕ್ತಿಗಳು ನಾವೆಯ ಭಾಗವಾಗಿರಬಹುದೆಂದು ಹೇಳಲಾಗುವ ಕಟ್ಟಿಗೆ ತುಂಡುಗಳನ್ನು ತಮ್ಮೊಂದಿಗೆ ತಂದಿರುತ್ತಾರೆ. ಕಾರ್ಬನ್-14 ದಿನಾಂಕ ಗುರುತಿಸುವಿಕೆಗೊಳಪಡಿಸಿದಾಗ, ಇವೆಲ್ಲವೂ ಅನ್ವೇಷಕರಿಗೆ ನಿರಾಶೆಯನ್ನುಂಟು ಮಾಡಿರುತ್ತವೆ, ದಿನಾಂಕವನ್ನು ಸುಮಾರು ಕ್ರಿ.ಶ. ಐದನೆಯ (ಅಥವಾ ನಂತರದ) ಸಮಯದಲ್ಲೆಂದು ಕಂಡು ಬಂದಿರುತ್ತದೆ - ನೋಹನ ಕಾಲದಿಂದ ಎಂದು ಹೇಳುವದಕ್ಕಿಂತಲೂ ಸಾವಿರಾರು ವರ್ಷ ಅತಿ ಕಿರಿಯ ದಿನಾಂಕವಾಗಿರುತ್ತವೆ. ಅಷ್ಟುಮಾತ್ರವಲ್ಲದೆ, ಈ ಸಂದರ್ಭದಲ್ಲಿ ಈ ಪ್ರಸ್ತಾಪಿತ ಸ್ಥಳಗಳಲ್ಲಿ ಯಾವದೇ ವೈಜ್ಞಾನಿಕ ಉತ್ಖನನ ಕಾರ್ಯವು ನಡೆಯುತ್ತಿಲ್ಲ, ಪ್ರಾಕ್ತನ ಕೃತಿಗಳ ಯಾವದೇ ವೈಜ್ಞಾನಿಕ ದಿನಾಂಕ ಗುರುತಿಸುವಿಕೆಯು ಈ ಯಾವದೇ ವಾದಗಳನ್ನು ದೃಢೀಕರಿಸಿರುವದಿಲ್ಲ. ಬೈಬಲ್ ವಿದ್ಯಾರ್ಥಿಗಳು ಆಧಾರಗಳನ್ನು ಒದಗಿಸದ ಕಥೆಗಳ ಮೇಲೆ ಅವಲಂಬಿತರಾಗುವ ಮುನ್ನ ಯೋಚಿಸತಕ್ಕದ್ದು[5]; ಒಬ್ಬ ವ್ಯಕ್ತಿಯು ನಾವೆಯನ್ನು ಕಂಡು ಹಿಡಿದಿದ್ದೇವೆಂದು ಹೇಳುವ ಅನ್ವೇಷಕರ ನಿಜವೆಂದು ಸಾಭಿತುಪಡಿಸದ ಕಥೆಗಳನ್ನು ಅಂಗೀಕರಿಸಿಕೊಳ್ಳದೆಯೇ ಪ್ರಳಯದ ಕುರಿತಾಗಿ ಬೈಬಲಿನಲ್ಲಿರುವ ಚರಿತ್ರೆಯನ್ನು ಖಂಡಿತವಾಗಿಯೂ ನಂಬುವದಕ್ಕೆ ಸಾಧ್ಯವಿರುತ್ತದೆ.

**ವಚನ 5. ಹತ್ತನೆಯ ತಿಂಗಳಿನವರೆಗೂ ನೀರು ಕಡಿಮೆ ಕಡಿಮೆಯಾಗುತ್ತಾ ಬಂತು.** ಮತ್ತು ಬಳಿಕ [ಆ] **ಹತ್ತನೆಯ ತಿಂಗಳಿನ ಮೊದಲನೆಯ ದಿನದಲ್ಲಿ ಬೆಟ್ಟಗಳ ಶಿಖರಗಳು ಕಾಣಬಂದವು.** "ನಾವೆ" "ಆರಾರಟ್" ಮೇಲೆ ಬಂದು ನಿಂತಿತು ಎಂದು ಹೇಳುವ 4ನೇ ವಚನ ಮತ್ತು, ಎರಡು ತಿಂಗಳಿಗೂ ಅಧಿಕ ಕಾಲವಾದ ಮೇಲೆ "ಕಾಣಬಂದ" "ಬೆಟ್ಟಗಳ ಶಿಖರಗಳ" ಮೇಲೆ ನಿಂತಿತು ಎಂದು ಹೇಳುವ 5ನೇ ವಚನದ ನಡುವೆ ತದ್ವಿರುದ್ಧತೆಯಿರುತ್ತದೋ? ಯಾವದೇ ನಿಜವಾದ ಸಮಸ್ಯೆಯು ಇರುವದಿಲ್ಲ. 4ನೇ ವಚನವು ನಾವೆ ಬೆಟ್ಟದ ಮೇಲೆ ನಿಂತ ವೇಳೆ ಒಣನೆಲವು ಕಾಣಿಸುತ್ತಿತ್ತೆಂದು ಹೇಳುವದಿಲ್ಲ. ಇದು ಅವಶ್ಯಕವಾಗಿರಲಿಲ್ಲ ಯಾಕೆಂದರೆ ನಾವೆಯು ನೆಲಕ್ಕೆ ಬಡಿದ ವೇಳೆ ಭಾಗಶಃ ನೀರಿನಲ್ಲಿ ಮುಳುಗಿರಬಹುದಾಗಿದೆ. ನಾವೆಯು ಗಟ್ಟಿಯಾದ ಸಂಗತಿಯೊಂದರ ಮೇಲೆ ನಿಂತುಕೊಂಡ ವೇಳೆ ನಾವೆಯೊಳಗಿದ್ದವರು ಆ ಶಬ್ದವನ್ನು ಕೇಳಿಸಿಕೊಂಡರು ಮತ್ತು ಅಲುಗಾಡುವಿಕೆಯ ಅನುಭವ ಹೊಂದಿದರು; ಮತ್ತು ಸ್ವಲ್ಪ ಕಾಲದೊಳಗೆ, ನೀರು ಕಡಿಮೆಯಾಗುತ್ತಾ ಹೋದಂತೆ, ತಾವು ಬೆಟ್ಟದ ತುದಿಯಲ್ಲಿ ಇದ್ದಾರೆಂಬುದನ್ನು ಗ್ರಹಿಸಿಕೊಂಡರು. ಅವರು ಒಂದು ಗಟ್ಟಿಯಾದ ನೆಲದ ಮೇಲಿದ್ದರಾದರೂ, ಆ ಕ್ಷೇತ್ರದಲ್ಲಿ ಬೇರೆ ಬೆಟ್ಟಗಳ ಶಿಖರಗಳು ಕಾಣಿಸುವದಕ್ಕೆ ಮುಂಚೆ ಎರಡಕ್ಕಿಂಥ ಅಧಿಕ ತಿಂಗಳುಗಳು ಗತಿಸಿದ್ದವು. ಇವುಗಳು "ಅರಾರಾಟ್ ಬೆಟ್ಟಗಳು" ಎಂದು ಗುರುತಿಸಲ್ಪಟ್ಟಿವೆ.

## ಒಣಭೂಮಿಯು ಕಾಣಿಸಿಕೊಳ್ಳುವಿಕೆ (8:6-14)

**6ನಾಲ್ವತ್ತು ದಿನಗಳಾದ ಮೇಲೆ ನೋಹನು ತಾನು ಮಾಡಿದ ನಾವೆಯ ಕಿಟಕಿಯನ್ನು ತೆರೆದು ಕಾಗೆಯನ್ನು ಹೊರಕ್ಕೆ ಬಿಟ್ಟನು. 7ಭೂಮಿಯ ಮೇಲಿದ್ದ ನೀರು ಒಣಗುವ ತನಕ ಆ ಕಾಗೆ ಹೋಗುತ್ತಾ ಬರುತ್ತಾ ಇತ್ತು. 8ಹೀಗಿರಲಾಗಿ ನೀರು ಇಳಿಯಿತೋ ಇಲ್ಲವೋ ಎಂದು ತಿಳುಕೊಳ್ಳುವದಕ್ಕೆ ನೋಹನು ಪಾರಿವಾಳವನ್ನು ಹೊರಕ್ಕೆ ಬಿಟ್ಟನು. 9ನೀರು ಭೂಮಿಯ**

**ಮೇಲೆಲ್ಲಾ ಇರುವದರಿಂದ ಪಾರಿವಾಳವು ಕಾಲಿಡುವದಕ್ಕೆ ಸ್ಥಳವನ್ನು ಎಲ್ಲಿಯೂ ಕಾಣದೆ ತಿರಿಗಿ
ನಾವೆಗೆ ಬಂತು. ನೋಹನು ಕೈಚಾಚಿ ಅದನ್ನು ಹಿಡಿದು ನಾವೆಯಲ್ಲಿ ತನ್ನ ಬಳಿಗೆ
ತೆಗೆದುಕೊಂಡನು.
[10]ಅವನು ಇನ್ನೂ ಏಳು ದಿವಸ ತಡೆದು ಪಾರಿವಾಳವನ್ನು ತಿರಿಗಿ ಹೊರಕ್ಕೆ
ಬಿಟ್ಟನು.
[11]ಸಂಜೆಯಲ್ಲಿ ಆ ಪಾರಿವಾಳವು ಅವನ ಬಳಿಗೆ ತಿರಿಗಿ ಬರಲು, ಆಹಾ, ಅದರ ಬಾಯಲ್ಲಿ
ಎಣ್ಣೇಮರದ ಹೊಸ ಚಿಗುರು ಇತ್ತು. ನೋಹನು ಅದನ್ನು ನೋಡಿ ನೀರು ಭೂಮಿಯ ಮೇಲಿಂದ
ಹರಿದು ಇಳಿದು ಹೋಯಿತು ಎಂದು ತಿಳುಕೊಂಡನು.
[12]ಮತ್ತೇಳು ದಿವಸದ ಮೇಲೆ
ಪಾರಿವಾಳವನ್ನು ಬಿಡಲು ಅದು ಅವನ ಬಳಿಗೆ ತಿರಿಗಿ ಬರಲೇ ಇಲ್ಲ.
[13]ಆರುನೂರ ಒಂದನೆಯ
ವರುಷದ ಮೊದಲನೆಯ ತಿಂಗಳಿನ ಮೊದಲನೆಯ ದಿನದಲ್ಲಿ ಭೂಮಿಯ ಮೇಲಿದ್ದ ನೀರು
ಇಳಿದಿತ್ತು. ನೋಹನು ನಾವೆಯ ಗವಸಣಿಗೆಯನ್ನು ತೆಗೆದು ನೋಡಲಾಗಿ, ಆಹಾ, ಭೂಮಿಯು
ಆರಿಹೋಗಿತ್ತು.
[14]ಎರಡನೆಯ ತಿಂಗಳಿನ ಇಪ್ಪತ್ತೇಳನೆಯ ದಿನದಲ್ಲಿ ಭೂಮಿಯು ಒಣಗಿತ್ತು.**

**ವಚನ 6.** ಸ್ಪಷ್ಟವಾಗಿರುವ ಪ್ರಕಾರ, "ಬೆಟ್ಟಗಳ ಶಿಖರಗಳು" ಕಾಣಿಸುವದಕ್ಕೆ ಮುನ್ನ (8:5) **ನಾಲ್ವತ್ತು ದಿನಗಳು** ಆಗಿದ್ದವು, ಮತ್ತು ಆ ಬಳಿಕ **ನೋಹನು** ಅಂತಿಮವಾಗಿ **ನಾವೆಯ ಕಿಟಕಿಯನ್ನು** [חַלּוֹן, *ಚಾಲ್ಲೊನ್*[6]] **ತೆರೆದ**ನು. ಈ ಕಥನವನ್ನು ಮುಚ್ಚುಮರೆಯಿಲ್ಲದೆ ಓದುವಾಗ ನೋಹನು ತಕ್ಕ ಸಮಯವು ಬಂದಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ತನಕ ನಾವೆಯಿಂದ ಹೊರಗೆ ಬರಲು ಮನಸ್ಸು ಮಾಡಲಿಲ್ಲ ಎಂಬ ಅಭಿಪ್ರಾಯವನ್ನು ಅದು ಮೂಡಿಸುತ್ತದೆ. ಪ್ರಯಾಣಿಕರು - ಮಾನವರು ಮಾತ್ರವೇ ಅಲ್ಲ, ಆದರೆ ನಾವೆಯಲ್ಲಿದ್ದ ಇತರ ಜೀವರಾಶಿಗಳು - ನಾವೆಯಿಂದ ಇಳಿಯುವದಕ್ಕೆ ಮುನ್ನ ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನೋಹನು ಬಯಸಿದನೆಂಬುದರಲ್ಲಿ ಸಂಶಯವೇ ಇರುವದಿಲ್ಲ. "ನೋಹನು ತೆರೆದ" "ಕಿಟಕಿಯು" ಬಹುಶಃ ಛಾವಣಿಯ ಮೇಲಿರುವ ಚಿಕ್ಕ ದ್ವಾರ ಆಗಿಬಹುದಾಗಿದೆ, ಆದ್ದರಿಂದ ಅವನಿಗೆ ನೀರು ಕಡಿಮೆಯಾಗುವದಾಗಲಿ ಅಥವಾ ಕೆಳಗಿನ ಭೂಮಿಯಾಗಲಿ ನೋಡುವದಕ್ಕೆ ಆಗಲಿಲ್ಲ. ಆತನು ಒಣ ನೆಲವು ಸಮೀಪದಲ್ಲಿ ಎಲ್ಲಾದರೂ ಇದೆಯೋ ಎಂದು ಕಂಡು ಹಿಡಿಯುವದಕ್ಕಾಗಿ ಏಕೆ ಪಕ್ಷಿಗಳನ್ನು ಹೊರಕ್ಕೆ ಕಳುಹಿಸಬೇಕಾಗಿತ್ತೆಂಬುದಕ್ಕೆ ಇದು ಕಾರಣವನ್ನು ತಿಳಿಸುವದಾಗಿದೆ.

**ವಚನ 7.** ದೇವರು ಮೂಲತಃ ಮನುಷ್ಯನ ಕೆಟ್ಟತನ, ನಾವೆಯೊಂದನ್ನು ನಿರ್ಮಿಸುವದರ ಅಗತ್ಯ, ಯಾವ ಪ್ರಾಣಿಗಳನ್ನು ಒಳಗೆ ಸೇರಿಸಿಕೊಳ್ಳಬೇಕು, ಮತ್ತು ಬರಲಿದ್ದ ಬಿರುಗಾಳಿ, ಇವುಗಳ ಬಗ್ಗೆ ಪ್ರಕಟನೆಗಳನ್ನು ನೀಡಿದ್ದಾದ ನಂತರದಲ್ಲಿ, ಯೆಹೋವನು ನೋಹನ ಸಂಗಡ ಮಾತಾಡಿರಲಿಲ್ಲ. ವಾಕ್ಯದ ಪ್ರಕಾರವಾಗಿ, ದೇವರು 8:15ನೇ ವಚನದ ತನಕ ಆತನ ಸಂಗಡ ಪುನಃ ಮಾತಾಡಿರಲಿಲ್ಲ; ಆದ್ದರಿಂದ ಭೂಮಿಯು ನಿವಾಸಕ್ಕಾಗಿ ಸಾಕಾಗುವಷ್ಟು ಒಣಗಿರುತ್ತದೋ ಎಂಬುದನ್ನು ತಿಳಿಯುವದಕ್ಕಾಗಿ ಪಕ್ಷಿಗಳನ್ನು ಹೊರಕ್ಕೆ ಕಳುಹಿಸುವದನ್ನು ಬಿಟ್ಟರೆ ಬೇರೆ ದಾರಿಯು ಆತನಿಗಿರಲಿಲ್ಲ.

ನೋಹನು ಮೊದಲ ಬಾರಿಗೆ **ಕಾಗೆಯನ್ನು ಹೊರಕ್ಕೆ ಬಿಟ್ಟನು**, ಅದು ಅದರ ಹಿಂದೆ ಕಳುಹಿಸಲ್ಪಡಲಿದ್ದ ಪರಿವಾಳಕ್ಕಿಂತ ಬಲಿಷ್ಠವಾದ ಪಕ್ಷಿಯಾಗಿತ್ತು.[7] ಕಾಗೆಯು ಕೊಳೆತ ಮಾಂಸವನ್ನು ಸೇವಿಸುವ ಒಂದು ಅಶುದ್ಧವಾದ ಪಕ್ಷಿಯಾಗಿತ್ತಾದ್ದರಿಂದ (ಯಾಜಕಕಾಂಡ 11:13, 15; ಧರ್ಮೋಪದೇಶಕಾಂಡ 14:12, 14), ಅದು ನೀರಿನ ಮೇಲೆ ತೇಲಾಡುತ್ತಿದ್ದಿರಬಹುದಾದ ಮೃತ ಪ್ರಾಣಿಗಳ ಕೊಳೆತ ಮಾಂಸವನ್ನು ಆಹಾರವಾಗಿ ಸೇವಿಸಬಹುದಿತ್ತು. ಆದದರಿಂದ, ಅದಕ್ಕೆ ಬದುಕುಳಿಯಲು ಒಣ ನೆಲವನ್ನು ಕಂಡುಕೊಳ್ಳುವದು ಅವಶ್ಯಕವಾಗಿರಲಿಲ್ಲ; ಅದು ಕೂತುಕೊಳ್ಳುವದಕ್ಕೆ ಒಂದು ಕಂಬಿಯನ್ನು ಕಂಡುಕೊಳ್ಳಲು ಪುನಃ ನಾವೆಯ ಬಳಿಗೆ ಹಾರಿಕೊಂಡು ಬರುವ ಅಗತ್ಯವೂ ಇರಲಿಲ್ಲ. ಯಾವ ಬಂಡೆಗಳ ಮೇಲೆ ನಾವೆಯು ಬಂದು

ನಿಂತಿತ್ತೋ ಆ ಬಂಡೆಗಳ ಮೇಲೆ ಅಥವಾ ನಾವೆಯ ಛಾವಣಿಯ ಮೇಲೆ ಆಗಾಗ ಕುಳಿತುಕೊಳ್ಳುವ ಸಾಧ್ಯತೆಯನ್ನು ಹೊರತು ಪಡಿಸಿ, **ಭೂಮಿಯ ಮೇಲಿದ್ದ ನೀರು ಒಣಗುವ ತನಕ ಆ ಕಾಗೆ ಹೋಗುತ್ತಾ ಬರುತ್ತಾ ಇತ್ತು**.

**ವಚನಗಳು 8, 9.** ತರುವಾಯ, ನೋಹನು ಭೂಮಿಯ ಮೇಲೆ ಒಣ ನೆಲವು ಇರುತ್ತದೋ ಎಂದು ತಿಳಿದುಕೊಳ್ಳಲು ನೋಹನು **ಪಾರಿವಾಳವನ್ನು ಹೊರಕ್ಕೆ ಬಿಟ್ಟನು.** ಪಾರಿವಾಳವು ಒಂದು ಶುದ್ಧ ಪಕ್ಷಿ ಎಂದು ಪರಿಗಣಿಸಲ್ಪಟ್ಟಿತ್ತು (15:9; ಯಾಜಕಕಾಂಡ 12:6), ಮತ್ತು ಅದು ಆಹಾರಕ್ಕಾಗಿ ಗಿಡಗಳನ್ನು ತಿನ್ನುತ್ತಿತ್ತು. ಈ ವಿಧವಾದ ಪಕ್ಷಿಗಳು ಕಣಿವೆಗಳಲ್ಲಿ ನೆಲೆಸುತ್ತವಾದ್ದರಿಂದ, ಪಾರಿವಾಳವನ್ನು "ಕೆಳಮಟ್ಟದ ಭೂಮಿಯು ನಿವಾಸಯೋಗ್ಯವಾಗಿದೆಯೋ ಎಂಬುದನ್ನು ನಿರ್ಧರಿಸುವದಕ್ಕೆ ಬಿಡುಗಡೆಗೊಳಿಸಲಾಯಿತು."[8] ಪಾರಿವಾಳವು ಕಪೋತದ ಕುಟುಂಬಕ್ಕೆ ಸೇರಿದ್ದಾಗಿದೆ. ನೋಹನು ನಾವೆಯಲ್ಲಿ ಮನೆಗೆ ಹಿಂದಿರುಗಿ ಹಾರಿ ಬರುವ ಕಪೋತಗಳನ್ನು ಇಟ್ಟುಕೊಂಡಿದ್ದನು ಎಂದು ಕೆಲವರು ಪ್ರಸ್ತಾಪವನ್ನಿಡುತ್ತಾರೆ.[9] ಆ ಪಾರಿವಾಳವು ಒಂದು ಮನೆಗೆ ಪುನಃ ಹಾರಿ ಬರುವ ಕಪೋತವಾಗಿತ್ತೋ ಅಥವಾ ಇಲ್ಲವೋ, ಅದು ನೋಹನ ಬಳಿಗೆ ಹಿಂದಿರುಗಿ ಬಂದದ್ದಂತೂ ನಿಜ.

ಬಹಳಷ್ಟು **ನೀರು ಭೂಮಿಯ ಮೇಲೆಲ್ಲಾ** ಇನ್ನೂ **ಇರುವದರಿಂದ** ಆಕೆಗೆ **ಕಾಲಿಡುವದಕ್ಕೆ ಸ್ಥಳವನ್ನು ಎಲ್ಲಿಯೂ ಕಾಣದೆ** ಹೋಯಿತು. "ಕಾಲಿಡುವದಕ್ಕೆ ಸ್ಥಳ" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು (מָנוֹחַ, *ಮಾನೊವಾಚ)* ಸಹ (נֹחַ, *ನೋವಾಚ)* ಎಂಬ ಪದದಂತೆಯೇ ಇರುತ್ತದೆ (5:28, 29; 8:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನೋಹನು ಪಾರಿವಾಳವನ್ನು ಪುನಃ ಒಳಗೆ ಸೇರಿಸಿಕೊಳ್ಳುವದು ಚಿತ್ರವತ್ತಾಗಿರುತ್ತದೆ: **ನೋಹನು ಕೈಚಾಚಿ ಅದನ್ನು ಹಿಡಿದು ನಾವೆಯಲ್ಲಿ ತನ್ನ ಬಳಿಗೆ ತೆಗೆದುಕೊಂಡನು**.

**ವಚನ 10.** ನೋಹನು **ಅವನು ಇನ್ನೂ ಏಳು ದಿವಸ ತಡೆದು ಪಾರಿವಾಳವನ್ನು** ತಿರಿಗಿ ಹೊರಕ್ಕೆ ಬಿಟ್ಟನು. ಇಲ್ಲಿ ಸೂಚ್ಯಾರ್ಥವಾಗಿರುವದೇನೆಂದರೆ ಆತನು ಕಾಗೆಯನ್ನು ಕಳುಹಿಸಿದ ಬಳಿಕ ಪಾರಿವಾಳವನ್ನು ಮೊದಲ ಬಾರಿಗೆ ಹೊರಗೆ ಕಳುಹಿಸುವದಕ್ಕೆ ಮುನ್ನ ಏಳು ದಿನಗಳ ವರೆಗೆ ಕಾದಿದ್ದನು ಎಂಬುದೆ (8:8). ಆ ತರುವಾಯ, ಆತನು ಎರಡನೆಯ ಬಾರಿಗೆ ಪಾರಿವಾಳವನ್ನು ಹೊರಕ್ಕೆ ಕಳುಹಿಸುವ ಮುನ್ನ, ಇನ್ನೂ ಏಳು ದಿನಗಳ ಕಾಲ ತಡೆದನು.

**ವಚನ 11. ಪಾರಿವಾಳವು ಸಂಜೆಯಲ್ಲಿ** ಹಿಂದಿರುಗಿ ಬಂದಿತು ಮತ್ತು **ಅದರ ಬಾಯಲ್ಲಿ ಎಣ್ಣೇಮರದ ಹೊಸ ಚಿಗುರು ಇತ್ತು**. ತಾಜಾ ಎಲೆಯು ಹೊಸದಾಗಿ ಚಿಗುರಿದ್ದಾಗಿತ್ತು, ಮತ್ತು ಅದು ಭೂಮಿಯು ಒಣಗಿರುತ್ತದೆ ಮತ್ತು ಆದಿಯಲ್ಲಿದ್ದ ಪ್ರಕಾರವೇ ಪುನಃ ಫಲವತ್ತಾಗಿರುತ್ತದೆ ಎಂಬುದಕ್ಕೆ ಪುರಾವೆಯನ್ನು ಒದಗಿಸಿತ್ತು (1:11, 12, 30). ಎಣ್ಣೇಮರಗಳು ಎತ್ತರದ ಶಿಖರಗಳಲ್ಲಿ ಬೆಳೆಯುವದಿಲ್ಲವಾದ್ದರಿಂದ, ಈಗ **ನೋಹನು ... ನೀರು ಭೂಮಿಯ ಮೇಲಿಂದ ಹರಿದು ಇಳಿದು ಹೋಯಿತು ಎಂದು ತಿಳುಕೊಂಡನು**.

**ವಚನ 12.** ಆದದರಿಂದ, ಮೂರನೆಯ ಬಾರಿಗೆ **ಪಾರಿವಾಳವನ್ನು** ಹೊರಗೆ ಕಳುಹಿಸುವ ಮುನ್ನ **ಮತ್ತೇಳು ದಿವಸದ** ತನಕ ಕಾದುಕೊಂಡನು, ಮತ್ತು ಈ ಸಾರಿ ಅದು **ಅವನ ಬಳಿಗೆ ತಿರಿಗಿ ಬರಲೇ ಇಲ್ಲ**. ಈ ಹಾರಾಟದ ವೇಳೆ, ಪಕ್ಷಿಯು ತನ್ನ ಬದುಕನ್ನು ಸಾಗಿಸುವದಕ್ಕೆ ಅನುಕೂಲಕರವಾದ ವಾತಾವರಣವನ್ನು ಕಂಡುಕೊಂಡಿತ್ತು; ಆದ್ದರಿಂದ ಮತ್ತೇ ನಾವೆಗೆ ಹಿಂದಿರುಗುವದು ಅವಶ್ಯಕವಾಗಿರಲಿಲ್ಲ.

**ವಚನ 13.** ಪ್ರಳಯದ ಚರಿತ್ರೆಯಲ್ಲಿ ಕಾಲದ ಅಂಶಕ್ಕೆ ಜಾಗರೂಕವಾದ ಗಮನವನ್ನು

ಕೊಡಲಾಗಿರುತ್ತದೆ. ಅದು **ಆರುನೂರ ಒಂದನೆಯ ವರುಷದ ಮೊದಲನೆಯ ತಿಂಗಳಿನ ಮೊದಲನೆಯ ದಿನದಲ್ಲಿ ಭೂಮಿಯ ಮೇಲಿದ್ದ ನೀರು ಇಳಿದಿತ್ತು** ಎಂದು ನಮಗೆ ಹೇಳಲ್ಪಟ್ಟಿದೆ. ತಾನು ಮತ್ತು ತನ್ನ ಕುಟುಂಬದವರು, ಇತರ ಜೀವರಾಶಿಗಳ ಸಮೇತವಾಗಿ ನಾವೆಯನ್ನು ತೊರೆದು ಹೊರಗೆ ಹೋಗಬೇಕಾದ ಸಮಯವು ಸಮೀಪಿಸುತ್ತಿದೆ ಎಂಬುದು **ನೋಹ**ನಿಗೆ ಗೊತ್ತಾಗಿತ್ತು; ಆದ್ದರಿಂದ ಆತನು **ನಾವೆಯ ಗವಸಣಿಗೆಯನ್ನು ತೆಗೆದು ನೋಡಲಾಗಿ, ಭೂಮಿಯು ಆರಿಹೋ**ಗಿರುವದನ್ನು ಕಂಡನು.

**ವಚನ 14.** ಕೊನೆಗೂ, **ಎರಡನೆಯ ತಿಂಗಳಿನ ಇಪ್ಪತ್ತೇಳನೆಯ ದಿನದಲ್ಲಿ ಭೂಮಿಯು ಒಣ**ಗಿರುವದನ್ನು ನೋಹನು ಕಂಡನು. 8:14ರಲ್ಲಿ ಬಣ್ಣಿಸಲಾಗಿರುವ ಘಟನೆಗಳು 8:13ರಲ್ಲಿನ ಘಟನೆಗಳು ಸಂಭವಿಸಿ ಎಂಟು ತಿಂಗಳಾಗಿದ್ದ ಮೇಲೆ ನಡೆದದ್ದರಿಂದ, ಆಂಗ್ಲ ವಾಚಕರಿಗೆ ಎರಡನೆಯ ಹೇಳಿಕೆಯು ಗೊಂದಲಕರವಾಗಿರಬಲ್ಲದು. ಲೇಖಕನು ಭೂಮಿಯು ಒಣಗಿರುವದರ ಕುರಿತು ಬಣ್ಣಿಸಲು ಇಬ್ರಿಯ ಭಾಷೆಯ ಎರಡು ಬೇರೆ ಬೇರೆ ಪದಗಳನ್ನು ಬಳಸಿದನು. 13ನೇ ವಚನದಲ್ಲಿ, חָרֵב (*ಚಾರೆಬ*) ಎಂಬ ಕ್ರಿಯಾಪದದ ಅರ್ಥವು "ನೀರು ಭೂಮಿಯ ಮೇಲಿನಿಂದ ಒಣಗುವದಕ್ಕೆ ಆರಂಭಿಸಿತ್ತು"[10] ಎಂದಾಗುತ್ತದೆ, ಆದರೆ ಅದು ಈಗಲೂ ಕೆಸರಿನಿಂದ ಕೂಡಿತ್ತು. 14ನೇ ವಚನದಲ್ಲಿ, יָבֵשׁ *(ಯಾಬೆಶ್)* ಎಂಬುದು, ಹೆಚ್ಚುಕಡಿಮೆ ಇನ್ನೂ ಎರಡು ತಿಂಗಳುಗಳ ಕಾಲ ಒಣಗಿದ ಬಳಿಕ, ಭೂಮಿಯು ಸಂಪೂರ್ಣ ಒಣಗಿದ್ದಾಗಿ ಮಾರ್ಪಟ್ಟಿತ್ತು[11] ಮತ್ತು ಈಗ ಅದು ಮಾನವರಿಗೆ ಮತ್ತು ಅತ್ಯಂಥ ಭಾರವಾಗಿರುವ ಪ್ರಾಣಿಗಳಿಗೆ ಸಹ ನಿಂತುಕೊಳ್ಳಲು ಗಟ್ಟಿಯಾದ ತಳಹದಿಯನ್ನು ಒದಗಿಸುವದಾಗಿತ್ತು ಎಂಬ ವಾಸ್ತವಾಂಶವನ್ನು ತಿಳಿಯಪಡಿಸುತ್ತದೆ.

## ನಾವೆಯಿಂದ ಹೊರ ಬರುವಂತೆ ದೇವರ ಆಜ್ಞೆ (8:15-19)

**15, 16 ಆಗ ದೇವರು ನೋಹನಿಗೆ - ನೀನು ಹೆಂಡತಿ ಮಕ್ಕಳು ಸೊಸೆಯರು ಸಹಿತವಾಗಿ ನಾವೆಯನ್ನು ಬಿಟ್ಟು ಹೊರಗೆ ಬಾ; 17 ನಿನ್ನ ಬಳಿಯಲ್ಲಿರುವ ಪಶು, ಪಕ್ಷಿ, ಕ್ರಿಮಿ ಮುಂತಾದ ಎಲ್ಲಾ ಜೀವಿಗಳೂ ಹೊರಗೆ ಬರಲಿ; ಅವುಗಳಿಗೆ ಭೂಮಿಯ ಮೇಲೆ ಬಹುಸಂತಾನವಾಗಲಿ; ಅವು ಅಭಿವೃದ್ಧಿಯಾಗಿ ಹೆಚ್ಚಲಿ ಎಂದು ಆಜ್ಞಾಪಿಸಲು 18 ನೋಹನು ಹೆಂಡತಿ - ಮಕ್ಕಳು ಸೊಸೆಯರು ಸಹಿತವಾಗಿ ಹೊರಗೆ ಬಂದನು. 19 ಮೃಗ ಪಶುಪಕ್ಷಿಕ್ರಿಮಿಗಳೆಲ್ಲವು ತಮ್ಮ ತಮ್ಮ ಜಾತಿಗನುಸಾರವಾಗಿ ನಾವೆಯಿಂದ ಹೊರಗೆ ಬಂದವು.**

**ವಚನಗಳು 15-17.** ನೋಹನು ಈಗಾಗಲೇ ಭೂಮಿಯು ಒಣಗಿದೆ ಮತ್ತು ಮಾನವರನ್ನು ಹಾಗೂ ಪ್ರಾಣಿಗಳನ್ನು ಸೇರಿಸಿಕೊಳ್ಳಲು ಸಿದ್ಧವಾಗಿದೆ ಎಂಬುದನ್ನು ಅರಿತಿದ್ದನು, ಆದರೆ ಆತನು ದೇವರಿಂದ ಅಪ್ಪಣೆಯನ್ನು ಸ್ವೀಕರಿಸುವ ತನಕ ಆ ದಿಕ್ಕಿನಲ್ಲಿ ಸಾಗಬೇಕೆಂಬುದರ ಬಗ್ಗೆ ಭಾವಿಸಿಕೊಳ್ಳಲಿಲ್ಲ. ಈ ಮುಂಚೆ ಹೇಳಿದ ಪ್ರಕಾರವಾಗಿ, ನಾವೆಯೊಳಗೆ ಪ್ರವೇಶಿಸಬೇಕೆಂದು (7:1–4) ನೋಹನಿಗೆ ಹೇಳಿದ್ದ ಸಮಯದಿಂದ ಈ ತನಕವೂ ಯೆಹೋವನ ಅವನ ಸಂಗಡ ಪುನಃ ಮಾತಾಡಿರಲಿಲ್ಲ. ನಂಬಿಗಸ್ತನಾದ ಮೂಲಪಿತೃವು ಕೆಳಗೆ ಇಳಿದು ಹೋಗುವದಕ್ಕೆ ಮುನ್ನ ದೈವಿಕ ಮಾರ್ಗದರ್ಶನಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿದ್ದನು.

ತಕ್ಕ ಸಮಯವು ಬಂದ ವೇಳೆ, **ದೇವರು ನೋಹನ** ಸಂಗಡ ಪುನಃ ಮಾತಾಡಿ ಆತನ ಕುಟಂಬದವರೊಂದಿಗೆ **ನಾವೆಯನ್ನು ಬಿಟ್ಟು ಹೊರಗೆ** ಬರಬೇಕೆಂದು ಹೇಳಿದನು, ಜೊತೆಗೆ **ಪಶು, ಪಕ್ಷಿ, ಕ್ರಿಮಿ ಮುಂತಾದ ಎಲ್ಲಾ ಜೀವಿಗಳೂ ಹೊರಗೆ ಬರಲಿ** ಎಂದು ಹೇಳಿದನು. ಅವರು ದೈವಿಕ ನ್ಯಾಯತೀರ್ಪಿನ ಪ್ರಳಯವು ನಿವಾಸಿಗಳಲ್ಲಿನ ದುಷ್ಟತನವನ್ನು ತೊಳೆದು ಶುದ್ಧ ಮಾಡಿದ್ದ

ಹೊಸದಾದ ಒಂದು ಲೋಕದೊಳಗೆ ಹೋಗಲಿದ್ದರು. ದೇವರು ಅವರಿಗೆ ನಾವೆಯಲ್ಲಿ ನಯನ ಮನೋಹರವಾದ ಬಿಡುಗಡೆಯನ್ನು ನೀಡುವದರೊಂದಿಗೆ ಒಂದು ಹೊಸ ಆರಂಭವನ್ನು ಒದಗಿಸಿದ್ದನು. ಒಂದು ಅರ್ಥದಲ್ಲಿ, ನೋಹನು ಒಬ್ಬ ಹೊಸ ಆದಾಮನಂತೆ ಇದ್ದನು. ಆತನು ಹಾಗೂ ಆತನ ಕುಟುಂಬದವರು ಒಂದು ಹೊಸ ಸೃಷ್ಟಿಯನ್ನು ಆರಂಭಿಸಬೇಕಾಗಿತ್ತು. ಪ್ರಾಣಿಗಳ ವಿಷಯದಲ್ಲಿಯೂ ಹಾಗೆಯೇ ಆಗಿತ್ತು. ಅವುಗಳು ಮತ್ತೊಂದಾವರ್ತಿ **ಭೂಮಿಯ ಮೇಲೆ ಬಹುಸಂತಾನವಾಗಬೇಕಿತ್ತು; ಅಭಿವೃದ್ಧಿಯಾಗಿ ಹೆಚ್ಚ**ಬೇಕಿತ್ತು.

**ವಚನಗಳು 18, 19.** ಈ ವಚನಗಳು 6:13–22 ಮತ್ತು 7:1–5 ವಾಕ್ಯಭಾಗಗಳಲ್ಲಿ ಬಣ್ಣಿಸಿರುವ ಘಟನೆಗಳಿಗೆ ಆತ್ಮೀಕ ಆಧಾರದ ನೆಲೆಯಾಗುತ್ತವೆ. ಮೊದಲನೆಯದಾಗಿ ದೈವಿಕ ಉಕ್ತಿಯು ಇರುತ್ತದೆ (8:15–17), ಮತ್ತು ಬಳಿಕ ನೋಹನು ಯೆಹೋವನ ಆಜ್ಞೆಗಳಿಗೆ ವಿಧೇಯನಾದನು ಎಂಬುದನ್ನು ಗಮನಿಸುತ್ತೇವೆ (8:18, 19). ದೈವಿಕ ಆಜ್ಞೆಗೆ ನಂಬಿಗಸ್ತಿಕೆಯಿಂದ ಪ್ರತಿಕ್ರಿಯೆಯನ್ನು ನೀಡುವವನಾಗಿ, **ನೋಹನು ಹೆಂಡತಿ - ಮಕ್ಕಳು ಸೊಸೆಯರು ಸಹಿತವಾಗಿ ಹೊರಗೆ ಬಂದನು**. ಅದೇ ರೀತಿಯಾಗಿ **ಮೃಗ ಪಶುಪಕ್ಷಿಕ್ರಿಮಿಗಳೆಲ್ಲವು ತಮ್ಮ ತಮ್ಮ ಜಾತಿಗನುಸಾರವಾಗಿ ನಾವೆಯಿಂದ ಹೊರಗೆ ಬಂದವು**.

ನಾವೆಯೊಳಗೆ ನೆಲೆಸಿದ್ದಂಥ ಜೀವಿಗಳೆಲ್ಲಾ **ತಮ್ಮ ಕುಟುಂಬಗಳಂತೆ ನಾವೆಯಿಂದ ಹೊರಗೆ** ಹೋದವು. ಇಲ್ಲಿ ಬಳಸಲಾಗಿರುವ ಇಬ್ರಿಯ ಪದವು מִשְׁפָּחָה *(ಮಿಸ್ಪಾಚಾಹ)* ಎಂಬುದು, ಇದು ಅನೇಕ ಸಾರಿ ಒಂದು ದೊಡ್ಡ ಗುಂಪಿ ಉಪವಿಭಾಗವಾಗಿ ಬಳಸಲ್ಪಡುತ್ತದೆ, ಉದಾಹರಣೆಗೆ ಒಂದು ಕುಲ ಅಥವಾ ಗೋತ್ರ. ಮಾನವ ಮಂಡಲದಲ್ಲಿ, *ಮಿಸ್ಪಾಚಾಹ* ಎಂಬುದು ಹಲವಾರು ಸಂಬಂಧವಿರುವ ಕುಟುಂಬಗಳನ್ನು ಅಥವಾ ಮುಂದೆ ಕ್ರಮೇಣದಲ್ಲಿ ಒಂದು ಗೋತ್ರವಾಗಿ ಬೆಳೆಯುವಂಥ ಕುಲಗಳನ್ನು ಒಳಗೊಂಡಿರುತ್ತದೆ,[12] ಈ ವಿಧವಾಗಿಯೇ ಯಾಕೋಬನ ಪುತ್ರರು ಬೆಳೆದು ಕುಟುಂಬಗಳಾಗಿ, ಕುಲಗಳಾಗಿ, ಮತ್ತು ಅಂತಿಮವಾಗಿ ಹನ್ನೆರಡು ಗೋತ್ರಗಳಾದರು (ಇಸ್ರಾಯೇಲ್ ಜನಾಂಗ). ಹೇಗೂ, ನೋಹನ ಕುಟುಂಬವು ಈ ಸಂದರ್ಭದಲ್ಲಿ ಬಹಳ ಚಿಕ್ಕದಾಗಿತ್ತು, ಅದರಲ್ಲಿ ಕೇವಲ ಆತನ ಹೆಂಡತಿ, ಮೂವರು ಪುತ್ರರು, ಮತ್ತು ಸೊಸೆಯರು ಮಾತ್ರವೇ ಸೇರಿದ್ದರು. "ಕುಟುಂಬಗಳು" ಎಂಬ ಹೇಳಿಕೆಯ ಕುರಿತಾದ ಪ್ರಾಥಮಿಕ ಒತ್ತು ಏನೆಂದರೆ ಪ್ರಾಣಿಗಳು ನಾವೆಯಿಂದ ಹೊರಗೆ ಹೋದವು ಎಂಬುದೆ. "ಕುಟುಂಬಗಳು" ಎಂಬುದರ ಬದಲಾಗಿ, ಇತರ ಕೆಲವು ತರ್ಜುಮೆಗಳು "ತಮ್ಮ ಜಾತಿಗನುಸಾರವಾಗಿ" (NIV; REB) ಅಥವಾ "ಒಂದಾದ ಮೇಲೊಂದು ಜಾತಿಯಂತೆ" (NJB) ಎಂದು ಬಳಸುತ್ತವೆ.

## ಲೋಕವನ್ನು ಇನ್ನೆಂದಿಗೂ ಪ್ರವಾಹದಿಂದ ತುಂಬಿಸುವದಿಲ್ಲವೆಂದು ದೇವರು ವಾಗ್ದಾನ ಮಾಡಿದ್ದು (8:20-22)

**20ಆಗ ನೋಹನು ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಮಾಡಿ ಅದರ ಮೇಲೆ ಶುದ್ಧವಾದ ಎಲ್ಲಾ ಪಶುಪಕ್ಷಿಜಾತಿಗಳಲ್ಲಿ ಸರ್ವಾಂಗಹೋಮ ಮಾಡಿದನು. 21ಅದರ ಸುವಾಸನೆಯು ಯೆಹೋವನಿಗೆ ಗಮಗಮಿಸಲು ಆತನು ಹೃದಯದೊಳಗೆ - ಮನುಷ್ಯರ ಮನಸ್ಸಂಕಲ್ಪವು ಚಿಕ್ಕಂದಿನಿಂದಲೇ ಕೆಟ್ಟದ್ದು; ಆದರೂ ನಾನು ಇನ್ನು ಮೇಲೆ ಅವರ ನಿಮಿತ್ತವಾಗಿ ಭೂಮಿಯನ್ನು ಶಪಿಸುವದಿಲ್ಲ; ನಾನು ಎಲ್ಲಾ ಜೀವಿಗಳನ್ನೂ ಈಗ ಸಂಹರಿಸಿದಂತೆ ಇನ್ನು ಮೇಲೆ ಸಂಹರಿಸುವದಿಲ್ಲ. 22ಭೂಮಿಯು ಇರುವ ತನಕ ಬಿತ್ತನೆಯೂ ಕೊಯಿಲೂ, ಚಳಿಯೂ ಸೆಕೆಯೂ, ಬೇಸಿಗೆಕಾಲವೂ ಹಿಮಕಾಲವೂ, ಹಗಲೂ ಇರುಳೂ ಇವುಗಳ ಕ್ರಮ ತಪ್ಪುವದೇ ಇಲ್ಲ**

**ಅಂದುಕೊಂಡನು.**

**ವಚನ 20.** ಪ್ರಳಯದಿಂದ ದೈವಿಕ ಬಿಡುಗಡೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮನುಷ್ಯನಿಂದ ಬರಬಹುದಾದ ಸ್ವಾಭಾವಿಕ ಮತ್ತು ಸೂಕ್ತವಾದ ಪ್ರತಿಕ್ರಿಯೆ ಎಂದರೆ ಆರಾಧಿಸುವದೇ. **ನೋಹನು ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಮಾಡಿ** ಅದರ ಮೇಲೆ **ಶುದ್ಧವಾದ ಎಲ್ಲಾ ಪಶುಪಕ್ಷಿಜಾತಿಗಳ** ಯಜ್ಞವನ್ನು ಅರ್ಪಿಸುವ ಮೂಲಕ ತನ್ನ ದೊಡ್ಡ ಕೃತಜ್ಞತಾಭಾವನೆಯನ್ನು ವ್ಯಕ್ತಪಡಿಸಿದನು. ಒಂದು ಯಜ್ಞವೇದಿಯನ್ನು ನಿರ್ಮಿಸುವದರ ಕುರಿತಾಗಿ ಶಾಸ್ತ್ರದಲ್ಲಿ ಇದೇ ಮೊದಲ ಉಲ್ಲೇಖವಾಗಿರುತ್ತದೆ, ಹಾಗಿದ್ದಾಗ್ಯೂ ಕಾಯಿನ ಮತ್ತು ಹೇಬೆಲರ ಕಥೆಯಲ್ಲಿ ಯಜ್ಞವೇದಿಯೊಂದಿತ್ತು ಎಂಬುದಾಗಿ ಒಬ್ಬನು ಊಹಿಸಿಕೊಳ್ಳಬಹುದಾಗಿದೆ (4:3-5). **ಸರ್ವಾಂಗಹೋಮ** ಎಂಬುದಕ್ಕಿರುವ ಇಬ್ರಿಯ ಪದವು עֹלָה *(ಒಲೊಥ)* ಎಂಬುದು, ಅದನ್ನು "ಸಾಮೂಹಿಕ ಬಲಿ" ಅಥವಾ "ಸಂಪೂರ್ಣಾಹುತಿ ಹೋಮಗಳು" ಎಂದು ಸಹ ಅನುವಾದಿಸಬಹುದಾಗಿದೆ. ಇವುಗಳು ಹಳೆಯ ಒಡಂಬಡಿಕೆಯಲ್ಲಿ ಅತ್ಯಂಥ ಹಳೆಯ ವಿಧವಾದ ಯಜ್ಞಗಳಾಗಿರಬಹುದು. ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ, ಅವುಗಳನ್ನು ಕಾಣಿಕೆಯಾಗಿ ಸಂತೋಷದಿಂದ ಅರ್ಪಿಸಲಾಗುತ್ತಿತ್ತು (ಯಾಜಕಕಾಂಡ 22:17-25; ಅರಣ್ಯಕಾಂಡ 15:1-13) ಮತ್ತು ಪಾಪಗಳಿಗೋಸ್ಕರ ಪ್ರಾಯಶ್ಚಿತ್ತ ಯಜ್ಞವಾಗಿ ಒಂದು ಕಾಣಿಕೆಯಂತೆ (קָרְבָּן, *ಕೊರ್ಬಾನ)* ಅರ್ಪಿಸಲಾಗುತ್ತಿತ್ತು (ನೋಡಿರಿ ಯಾಕಜಕಕಾಂಡ 1:2-4; 16:24). ಅವುಗಳನ್ನು ಕೆಲವು ಸಾರಿ ಕಷ್ಟದ ಸಮಯದಲ್ಲಿ ಬಂದು ಸಹಾಯವನ್ನು ಮಾಡುವಂತೆ ದೇವರಿಗೆ ಪ್ರಾರ್ಥನೆ ಮಾಡುವದರೊಂದಿಗೆ ಸಮರ್ಪಿಸಲಾಗುತ್ತಿತ್ತು (ನ್ಯಾಯಸ್ಥಾಪಕ 21:1-4; ಯೆರೆಮೀಯ 14:12).[13] ಪ್ರಾಚೀನ ಕಾಲದಲ್ಲಿ ಬೇರೆ ವಿಧವಾದ ಯಜ್ಞಗಳ ವಿಷಯದಲ್ಲಿ ಮಾಡಲಾಗುತ್ತಿದ್ದ ರೀತಿಯಂತಲ್ಲದೆ, ಆರಾಧಕನಿಗೆ ಈ ಯಜ್ಞದಲ್ಲಿ ಸೇವಿಸುವದಕ್ಕೆ ಏನೂ ಕೊಡಲ್ಪಡುತ್ತಿರಲಿಲ್ಲ. ಬದಲಾಗಿ, ಇಡೀ ಪ್ರಾಣಿಯು ಯಜ್ಞವೇದಿಯಲ್ಲಿ ಸುಡಲ್ಪಡುತ್ತಿತ್ತು, ಅದು ಆ ವ್ಯಕ್ತಿಯು ಯೆಹೋವನಿಗೆ ಸಂಪೂರ್ಣವಾಗಿ ತೋರುವ ಭಕ್ತಿ ಮತ್ತು ಪ್ರತಿಷ್ಠೆಯನ್ನು ಸೂಚಿಸುವದಾಗಿತ್ತು.

**ವಚನ 21.** ನೋಹನು ಈ ಯಜ್ಞಗಳನ್ನು ಮಾಡಿದಾಗ, ಅವುಗಳ **ಸುವಾಸನೆಯು ಯೆಹೋವನಿಗೆ ಗಮಗಮಿಸಲ್ಪಟ್ಟಿತು**. "ಯೆಹೋವನಿಗೆ ಗಮಗಮಿಸಲ್ಪಟ್ಟಿತು" ಎಂಬುದು ಮನುಷ್ಯತ್ವಾರೋಪಣದ ಮಾತಾಗಿದ್ದು, ದೇವರ ವಿಷಯದಲ್ಲಿ ಆತನಿಗೆ ಮಾನವ ಗುಣಸ್ವಭಾವಗಳಿರುತ್ತವೋ ಎಂಬ ರೀತಿಯಲ್ಲಿ ಬಣ್ಣಿಸುವಿಕೆ ಆಗಿದೆ. ಬೈಬಲ್ ಅನೇಕ ಸಾರಿ ದೇವರ ವಿಷಯವಾಗಿ ಆತನಿಗೆ ಕಣ್ಣುಗಳಿರುತ್ತವೆ, ಕಿವಿಗಳು, ಕೈಗಳು, ಅಥವಾ ಪಾದಗಳಿರುತ್ತವೆ ಎಂಬಂತೆ ಮಾತಾಡುತ್ತದೆ, ಆದಾಗ್ಯೂ ಆತನಿಗೆ ಮಾನವನಂತೆ ಶಾರೀರಿಕ ದೇಹವು ಇರುವದಿಲ್ಲವಷ್ಟೆ (ಯೋಹಾನ 4:24). ದೇವರು ಯಜ್ಞಗಳು ಯಜ್ಞವೇದಿಯ ಮೇಲೆ ಸಂಪೂರ್ಣವಾಗಿ ಧಹಿಸಲ್ಪಡುವ ವೇಳೆ ಆ "ಸುವಾಸನೆ"ಯು ದೇವರಿಗೆ "ಗಮಗಮ" ಎಂಬಂತಿತ್ತು ಎಂಬ ಹೇಳಿಕೆಯು ಆತನು ಆರಾಧಕನನ್ನೂ ಯಜ್ಞವನ್ನೂ ಅಂಗೀಕರಿಸಿಕೊಂಡನು ಎಂಬುದನ್ನು ಸೂಚಿಸುತ್ತದೆ.[14] ನೋಹನ ಯಜ್ಞಗಳು ದೇವರಿಗೆ ಮೆಚ್ಚಿಕೆಯಾಗಿದ್ದವು ಯಾಕೆಂದರೆ ಅವುಗಳು ಆತನಿಗೆ ಸಂಪೂರ್ಣವಾಗಿ ಸಮರ್ಪಿತವಾದ ಜೀವಿತಗಳನ್ನು ಪ್ರತಿನಿಧಿಸಿದ್ದವು. ಹೊಸ ಒಡಂಬಡಿಕೆಯಲ್ಲಿ, ಪೌಲನು ಕರ್ತನಿಗೆ ಮೆಚ್ಚಿಕೆಯಾದ ಮತ್ತು ಸಮರ್ಪಕವಾದ ಕಾಣಿಕೆಗಳನ್ನು ತ್ಯಾಗದಿಂದ ಕೊಡುವದನ್ನು ಉಲ್ಲೇಖಿಸುತ್ತಾ ಇದೇ ವಿಧವಾದ ಸಾದೃಶ್ಯವನ್ನ ಬಳಸುತ್ತಾನೆ (ಎಫೆಸ 5:2; ಫಿಲಿಪ್ಪಿ 4:18).

ಈ ದೃಶ್ಯವು *The Epic of Gilgamesh*ನಲ್ಲಿ ಬಣ್ಣಿಸಲಾಗಿರುವ ಬಾಬೆಲಿನ ದೇವರುಗಳು ಪ್ರತಿಕ್ರಿಯೆಗೆ ಅತ್ಯಂಥ ತದ್ವಿರುದ್ಧವಾಗಿ ನಿಲ್ಲುತ್ತದೆ. ಪುರಾಣವು ಹೇಳುವದೇನೆಂದರೆ ಭೂಮಿಯ

ಮೇಲೆ ಪ್ರಳಯವಿದ್ದ ವೇಳೆಯಲ್ಲಿ ದೇವರುಗಳು ಏಳು ದಿನಗಳ ಕಾಲ ಆಹಾರವಿಲ್ಲದೆ ಕಳೆದಿದ್ದವು ಮತ್ತು ಅತ್ಯಂಥ ಹಸಿವೆಯಿಂದ ಇದ್ದವು ಎಂಬುದೆ. ಉತ್ನಾಪಿಸ್ಟಿಮನು (ಬಾಬೆಲಿನ ನೋಹ) ನಾವೆಯೊಳಗಿಂದ ಹೊರಗೆ ಬಂದು ಯಜ್ಞಗಳನ್ನು ಅರ್ಪಿಸಿದ ವೇಳೆ, "ದೇವರುಗಳು ರುಚಿಯಾದ ಸುವಾಸನೆಯನ್ನು ತಿಳಿದವು" ಮತ್ತು "ಯಜ್ಞಗಳ ಸುತ್ತಲು ನೊಣಗಳಂತೆ ಗುಂಪುಗೂಡಿದರು."[15] ದೇವರುಗಳ ಈ ವಿಚಿತ್ರವಾದ ವರ್ತನೆಯು ತೋರಿಸುವದೇನೆಂದರೆ ಅವುಗಳು ಆಹಾರಕ್ಕೋಸ್ಕರ ಸಂಪೂರ್ಣವಾಗಿ ಪ್ರಳಯದಲ್ಲಿ ಬದುಕುಳಿದವನ ಮೇಲೆಯೇ ಅವಲಂಬಿತವಾಗಿದ್ದವು ಎಂಬುದೆ.

ನೋಹನ ಯಜ್ಞಗಳಿಗೆ ತನ್ನ ಅಂಗೀಕಾರವನ್ನು ನೀಡುವವನಾಗಿ, ಯೆಹೋವನು **ಹೃದಯದೊಳಗೆ** (ಅಕ್ಷರಶಃ "ತನ್ನ ಹೃದಯಕ್ಕೆ") ಹೇಳಿಕೊಂಡದ್ದೇನೆಂದರೆ ತಾನು **ಇನ್ನು ಮೇಲೆ ಅವರ ನಿಮಿತ್ತವಾಗಿ ಭೂಮಿಯನ್ನು ಶಪಿಸುವದಿಲ್ಲ**. ಕೆಲವರು ಇದನ್ನು 3:17ರಲ್ಲಿ ಆದಾಮನು ಪಾಪ ಮಾಡಿದ ವೇಳೆ ತಾನು ಭೂಮಿಗೆ ನೀಡಿದ್ದ ಶಾಪವನ್ನು ಯೆಹೋವನು ಹಿಂಪಡೆಯುತ್ತಿದ್ದಾನೆ ಎಂಬಂತೆ ವ್ಯಾಖ್ಯಾನಿಸುತ್ತಾರಾದರೂ, ಆ ಘಟನೆಯು ಪ್ರಳಯದ ಮುಕ್ತಾಯದ ಸಂದರ್ಭದಲ್ಲಿ ದೃಶ್ಯದಲ್ಲಿಯೇ ಇರುವದಿಲ್ಲ. 8:21ರಲ್ಲಿನ ಹೇಳಿಕೆಯು 6:5-7, 11-13ಕ್ಕೆ ಸಂಬಂಧ ಪಟ್ಟಿದೆಯೇ, ಹೊರತು ಏದೆನ್ ತೋಟದಲ್ಲಿನ ಶಾಪಕ್ಕೆ ಸಂಬಂಧ ಪಟ್ಟಿರುವದಿಲ್ಲ. ದೇವರು ಪ್ರಳಯದಲ್ಲಿ ಭೂಮಿಯ ಮೇಲೆ ಬಂದಂಥ ಶಾಪಕ್ಕೆ ಸಂಬಂಧ ಪಟ್ಟಂತೆ ಪ್ರತಿಜ್ಞೆಯನ್ನು ಮಾಡಿದನು. ಇದು ವಿವಾದಾತೀತವಾದದ್ದು ಯಾಕೆಂದರೆ ಪ್ರವಾಹದ ನಂತರದಲ್ಲಿ, ಮನುಷ್ಯನು ತನ್ನ ಜೀವನೋಪಾಯಕ್ಕಾಗಿ ಅವಶ್ಯಕವಾದ ಬೆಳೆಗಳನ್ನು ಬೆಳೆಯುವದಕ್ಕೋಸ್ಕರ ಕಷ್ಟ ಮತ್ತು ಪರಿಶ್ರಮಗಳನ್ನು ಪಡುವದರಲ್ಲಿ ಭೂಮಿಯ ಮೇಲಿನ ಶಾಪವು ಮುಂದುವರೆದಿತ್ತು. ಮನುಷ್ಯನಿಗೆ ಈಗಲೂ ಕಠಿಣವಾಗಿ ದುಡಿಯುವದು ಅಗತ್ಯವಿರುತ್ತದಾದರೂ, ದೇವರು ಲೋಕವನ್ನು ಪುನಃ ಇನ್ನೆಂದಿಗೂ ಪ್ರಳಯದಿಂದ ನಾಶ ಮಾಡುವದಿಲ್ಲ ಎಂದು ವಾಗ್ದಾನ ಮಾಡಿದನು.

"ಇನ್ನು ಮೇಲೆ" "ಭೂಮಿಯನ್ನು ಶಪಿಸುವದಿಲ್ಲ" ಅಥವಾ ಈ ವಿಧದಲ್ಲಿ **ಎಲ್ಲಾ ಜೀವಿಗಳನ್ನೂ ... ಇನ್ನು ಮೇಲೆ ಸಂಹರಿಸುವದಿಲ್ಲ** ಎಂಬುದಾಗಿ ಪ್ರತಿಜ್ಞೆ ಮಾಡುವದಕ್ಕೆ ಕಾರಣವು ಈ ರೀತಿಯಾಗಿರುತ್ತದೆ: **ಮನುಷ್ಯರ ಮನಸ್ಸಂಕಲ್ಪವು ಚಿಕ್ಕಂದಿನಿಂದಲೇ ಕೆಟ್ಟದ್ದು**. ಅಂದರೆ, ಮನುಷ್ಯನು ಜವಾಬ್ದಾರಿಯ ವಯಸ್ಸಿನಿಂದಲೂ, ಆತನು ಯಾವಾಗ ಒಳ್ಳೇದು ಮತ್ತು ಕೆಟ್ಟದ್ದು ಯಾವದೆಂದು ವಿವೇಚಿಸುವದಕ್ಕೆ ಶಕ್ತನಾಗುತ್ತಾನೋ ಅಂದಿನಿಂದಲೂ ಪಾಪಭರಿತನಾಗಿದ್ದಾನೆ. "ಕಾರಣ" ಎಂಬುದನ್ನು ಎರಡು ವಿಧದಲ್ಲಿ ಅನುವಾದಿಸಬಹುದಾಗಿದೆ: כִּי *(ಕಿ)* ಎಂಬ ಇಬ್ರಿಯ ಸಂಬಂಧಾವ್ಯಯವನ್ನು ಸಾಮಾನ್ಯ ಅರ್ಥದಲ್ಲಿ "ಯಾಕೆಂದರೆ" ಅಥವಾ "ಕಾರಣದಿಂದ" ಎಂಬುದಾಗಿ ಅನುವಾದಿಸಬಹುದು, ಅದರರ್ಥವು ಮನುಷ್ಯನ ಹೃದಯವು ಕೆಟ್ಟದ್ದಾಗಿರುವ ಕಾರಣ ಯೆಹೋವನು ಲೋಕವನ್ನು ಮತ್ತೊಮ್ಮೆ ಪ್ರಳಯದಿಂದ ನಾಶಗೊಳಿಸುವದಿಲ್ಲ ಎಂದಾಗುತ್ತದೆ. 6:5ರ ಪ್ರಕಾರವಾಗಿ, ಮೊಟ್ಟಮೊದಲನೆಯದಾಗಿ ದೇವರು ಭೂಮಿಯ ಮೇಲೆ ಪ್ರಳಯವನ್ನು ಕಳುಹಿಸಿದ್ದಕ್ಕೆ ಕಾರಣವು ಅದೇ ಆಗಿತ್ತು. ಹಾಗಾದರೆ, ಈ ವ್ಯಾಖ್ಯಾನವು ಒಂದು ತೀಕ್ಷ್ಣವಾದ ತದ್ವಿರುದ್ಧತೆಯನ್ನು ಒಳಗೊಂಡಿರುತ್ತದೆ: ಮನುಷ್ಯನು ಹೃದಯದಲ್ಲಿ ಯೋಚಿಸುವದು ಯಾವಾಗಲೂ ಕೆಟ್ಟದ್ದೇ ಆಗಿರುವದರಿಂದಾಗಿ ದೇವರು ಹಳೆಯ ಲೋಕವನ್ನು ನಾಶಗೊಳಿಸುವದಕ್ಕಾಗಿ ಪ್ರಳಯವನ್ನು ಬರಮಾಡಿದನು; ಆದರೆ ಪ್ರಳಯದ ನಂತರದಲ್ಲಿ ಅದೇ ರೀತಿಯ ಶಾಪವನ್ನು ಭೂಮಿಯ ಮೇಲೆ ಮಾನವ ಪಾಪದ ನಿಮಿತ್ತವಾಗಿ ಬರಮಾಡುವದಿಲ್ಲ ಎಂದು ಆತನು ವಾಗ್ದಾನ ಮಾಡುತ್ತಾನೆ.

ಬೇರೆ ವ್ಯಾಖ್ಯಾನದೊಂದಿಗೆ ಯಾವದೇ ವಿವಾದವು ಇರುವದಿಲ್ಲ. *ಕಿ* ಎಂಬುದು ಇಬ್ರಿಯ ಭಾಷೆಯಲ್ಲಿ ಒಂದು ರಿಯಾಯಿತಿ ಸೂಚಕ ಸಂಬಂಧಾವ್ಯವಾಗಿ ಸಹ ಅನೇಕ ಸಾರಿ ಬಳಸಲ್ಪಡುತ್ತದೆ, ಅಲ್ಲಿ ಅದು "ಹಾಗಿದ್ದರೂ" ಅಥವಾ "ಇದ್ದಾಗ್ಯೂ" (ನೋಡಿರಿ NKJV; NIV) ಎಂಬ ಅರ್ಥವಾಗುತ್ತದೆ. ಈ ಬೆಳಕಿನಲ್ಲಿ ವ್ಯಾಖ್ಯಾನಿಸುವದಾದರೆ, ಹೇಳಿಕೆಯು ಯೆಹೋವನ ದೈವಿಕ ಕರುಣೆಯ ಕುರಿತಾಗಿ ಈ ಮುಂದಿನಂತೆ ಒತ್ತಿ ಹೇಳುವದಾಗಿದೆ: ಪ್ರತಿಯೊಬ್ಬ ವ್ಯಕ್ತಿಯು ತನ್ನ ಯುವಪ್ರಾಯದಿಂದಲೂ ಪಾಪ ಮಾಡಿರುವನಾದಾಗ್ಯೂ, ದೇವರು ಆತನಿಗೆ ಅರ್ಹತೆಯಿಲ್ಲದಂಥ ಕೃಪೆಯನ್ನು ನೀಡುತ್ತಾನೆ. ಸರಳವಾಗಿ ಹೇಳುವದಾದರೆ, ಭೂಮಿಯ ಮೇಲಿರುವ ಪ್ರತಿಯೊಬ್ಬನೂ ಕೆಟ್ಟ ಆಲೋಚನೆಗಳನ್ನು ಇಟ್ಟುಕೊಂಡು ದುಷ್ಕೃತ್ಯಗಳನ್ನು ನಡಿಸಿದವರಾಗಿದ್ದಾಗ್ಯೂ ಮತ್ತು ಆ ಮೂಲಕ ನ್ಯಾಯತೀರ್ಪು ಮತ್ತು ಮರಣಕ್ಕೆ ಯೋಗ್ಯರಾಗಿದ್ದಾಗ್ಯೂ, ದೇವರು ಭವಿಷ್ಯದಲ್ಲಿ ಯಾವದೇ ವಿಶ್ವವ್ಯಾಪಿ ಪ್ರಳಯವುಂಟಾಗಿ ನಾಶವಾಗುವದರಿಂದ ಮನುಷ್ಯರನ್ನು ಕಾಪಾಡುವೆನು ಎಂಬ ತನ್ನ ವಾಗ್ದಾನವನ್ನು ಉಳಿಸಿಕೊಳ್ಳುವನು.

**ವಚನ 22.** ಈ ಲೋಕವನ್ನು ಆಶೀರ್ವದಿಸಬೇಕೆಂಬ ದೇವರ ದೃಢಸಂಕಲ್ಪವು ಮುಂದುವರೆಯಿತು. ಭೂಮಿಯ ಮೇಲೆ ಇನ್ನೊಂದು ವಿನಾಶಕಾರಿಯಾದ ಪ್ರಳಯದ ನೀರಿನ ಬದಲಾಗಿ, ಭೂಗ್ರಹವನ್ನು ನಿವಾಸಕ್ಕೆ ಯೋಗ್ಯವನ್ನಾಗಿಸಲು ಆತನು ಒಂದು ಕ್ರಮಬದ್ಧತೆಯನ್ನು ತರುತ್ತೇನೆಂದು ವಾಗ್ದಾನ ಮಾಡಿದನು. ಆತನು **... ಬಿತ್ತನೆಯೂ ಕೊಯಿಲೂ, ಚಳಿಯೂ ಸೆಕೆಯೂ, ಬೇಸಿಗೆಕಾಲವೂ ಹಿಮಕಾಲವೂ, ಹಗಲೂ ಇರುಳೂ ಇವುಗಳ ಕ್ರಮ ತಪ್ಪುವದೇ ಇಲ್ಲ** ಎಂದು ಭರವಸ ಕೊಟ್ಟನು. ಮನುಷ್ಯನ ಹೃದಯವು ಯಾವಾಗ ಹೇಗೆ ಬದಲಾಗುತ್ತದೆಂದು ಹೇಳಲಾಗದ್ದು ಮತ್ತು ಚಂಚಲವಾದದ್ದು ಆಗಿದ್ದರೂ (8:21), ದೇವರು ನವೀಕರಿಸಿದ ಲೋಕದಲ್ಲಿನ ಕಾಲಚಕ್ರಗಳಲ್ಲಿ ಯಾವಾಗಲೂ ಒಂದು ಪ್ರಮಾಣದ ವಿಶ್ವಾಸರ್ಹತೆ ಹಾಗೂ ಸ್ಥಿರತೆಯು ಇದ್ದೇ ಇರುವದು. ಪ್ರೇರಿತ ಲೇಖಕನು "ಬಿತ್ತನೆಯ ಮತ್ತು ಸುಗ್ಗಿಯ" ಕೃಷಿಯ ಕಾಲಗಳನ್ನು ಮರುಸ್ಥಾಪನೆ ಮಾಡುವ ದೇವರ ತೀರ್ಮಾನವನ್ನು ಕುರಿತು ಒತ್ತಿ ಹೇಳಿದನು (ನೋಡಿರಿ 1:14). ಜೀವನೋಪಾಯಕ್ಕೆ ಇವುಗಳು ಅವಶ್ಯಕವಾಗಿದ್ದವು, ಮತ್ತು ಲೋಕವು ಈಗಲೂ ಸಂಪೂರ್ಣವಾಗಿ ದೇವರ ನಿಯಂತ್ರಣ ಮತ್ತು ಆಶೀರ್ವಾದದ ಅಡಿಯಲ್ಲಿರುತ್ತದೆ ಎಂಬುದಕ್ಕೆ ಪುರಾವೆಯಾಗಿ ಅವುಗಳಿದ್ದವು (ನೋಡಿರಿ ಮತ್ತಾಯ 5:45; ಕೊಲೊಸ್ಸೆ 1:17; ಇಬ್ರಿಯ 1:3).

ಕ್ರಮಬದ್ಧತೆಯನ್ನು ಉಳಿಸಿಕೊಂಡು ಹೋಗುವೆನೆಂಬ ದೇವರ ವಾಗ್ದಾನವು **ಭೂಮಿಯು ಇರುವ ತನಕ** ಎಂಬುದರಿಂದ ಅರ್ಹಗೊಳಿಸಲ್ಪಟ್ಟಿರುತ್ತದೆ. ಇಲ್ಲಿ ಬಳಸುವ ಭಾಷೆಯು ಮುಂದೆ ಲೋಕವು ಇಲ್ಲದೆ ಹೋಗುವಂಥ ಕಾಲ ಬರುತ್ತದೆ ಎಂಬುದನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ. ಇದು ಹೊಸ ಒಡಂಬಡಿಕೆಯೊಳಗೆ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುತ್ತದೆ, ದೇವರು ಕ್ರಿಸ್ತನ ಎರಡನೆಯ ಬರೋಣದ ವೇಳೆ ಅಂತಿಮವಾಗಿ ಈಗಿನ ಲೋಕವನ್ನು ನಾಶಗೊಳಿಸುವನು ಎಂಬುದಾಗಿ ಅದು ಹೇಳುತ್ತದೆ. ನೋಹನ ದಿನದಲ್ಲಾದ ಹಾಗೆ, ಈಗಿನ ಲೋಕವು ನೀರಿನಿಂದ ನಾಶವಾಗುವದರ ಬದಲಾಗಿ ಅಗ್ನಿಯಿಂದ ಧಹಿಸಿ ಹೋಗುವುದು (2 ಪೇತ್ರ 3:6, 7, 10, 12). ಆದದರಿಂದ, ದೇವರ ಜನರು "ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು" (2 ಪೇತ್ರ 3:13).

# ಅನ್ವಯಿಸುವಿಕೆ

## ನೀರಿನ ಮೂಲಕವಾಗಿ ರಕ್ಷಿಸಲ್ಪಟ್ಟಿದ್ದು (ಅಧ್ಯಾಯ 8)

ನಾವೆಯಲ್ಲಿದ್ದ ಎಂಟು ಜನರ ವಿಷಯದಲ್ಲಿ ನೋಡುವದಾದರೆ, ಅವರ ಬಿಡುಗಡೆಯು ಪಂಚಾಶತ್ತಮ ದಿನ ಮೊದಲ್ಗೊಂಡು ಇಂದಿನ ತನಕವೂ ಕ್ರೈಸ್ತರು ಅನುಭವಿಸಿರುವ ರಕ್ಷಣೆಯ ಒಂದು ಛಾಯೆ (τύπος, *ಟುಪೊಸ)* ಆಗಿರುತ್ತದೆ. (1) ಚರಿತ್ರೆಯು ಹೇಳುವದೇನೆಂದರೆ, ನೋಹ ಮತ್ತು ಆತನ ಕುಟುಂಬದವರು ನಂಬಿಕೆಯ ಮೂಲಕವೇ ಒಂದು ಆಶ್ರಯದ ಸ್ಥಳವಾದ ನಾವೆಯೊಳಗೆ ಪ್ರವೇಶಿಸಿದರು. ಪಶ್ಚಾತ್ತಾಪ ಪಟ್ಟಿರುವ ವಿಶ್ವಾಸಿಗಳು "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರು" (ರೋಮಾ 6:3), ಆತನೇ ನಮ್ಮ ಆತ್ಮೀಕ ಆಶ್ರಯಸ್ಥಾನ ಆಗಿರುತ್ತಾನೆ. (2) ಪ್ರಳಯವು ಹಳೆಯ ಲೋಕದಲ್ಲಿದ್ದ ಪಶ್ಚಾತ್ತಾಪವಿಲ್ಲದ ಜನರಿಗೆ ಮರಣವನ್ನುಂಟು ಮಾಡುವ ಸಾಧನವಾಗಿತ್ತು; ಆದರೆ ಅದು ನೋಹ ಮತ್ತು ನಾವೆಯಲ್ಲಿದ್ದ ಇತರರನ್ನು ರಕ್ಷಿಸಿತ್ತು. ಪಶ್ಚಾತ್ತಾಪವುಳ್ಳ ವಿಶ್ವಾಸಿಗಳು ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ (ರೋಮಾ 6:3), ಅವರು ಅವಸಾನಗೊಳ್ಳುವದರ ಬದಲಾಗಿ ಆತನ ಮೂಲಕವಾಗಿ ಆತ್ಮೀಕ ಜೀವವನ್ನು ಪಡೆದುಕೊಳ್ಳುವರು. (3) "ಎಂಟೇ ಜನರು [ನೋಹ ಮತ್ತು ಆತನ ಕುಟುಂಬ] ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು" ಎಂದು ಪೇತ್ರನು ಹೇಳಿದನು; ಹಾಗಿದ್ದರೂ, ಅಥವಾ ಅದಕ್ಕೆ ಸಂಬಂಧ ಪಟ್ಟಂತೆ [ἀντίτυπος][16] ದೀಕ್ಷಾಸ್ನಾನವು ಈಗ ನಿಮ್ಮನ್ನು ರಕ್ಷಿಸುತ್ತದೆ" (1 ಪೇತ್ರ 3:20, 21). (4) ನಂಬಿಕೆಯಿಂದಲೇ ನೋಹ ಮತ್ತು ಆತನ ಕುಟುಂಬದವರು ಹೊಸಬರಾಗಿ (ರಕ್ಷಣೆ ಹೊಂದಿದವರಾಗಿ) ನಾವೆಯೊಳಗಿಂದ ಹೊರಗೆ ಬಂಧರು, ಗತಕಾಲದ ದುಷ್ಟತನವು ಹೋಗಲಾಡಿಸಲ್ಪಟ್ಟು ಶುದ್ಧ ಮಾಡಿದ ಲೋಕದೊಳಗೆ ಒಂದು ಹೊಸ ಆರಂಭವನ್ನು ಹೊಂದಿದವರಾಗಿದ್ದರು. ಪಶ್ಚಾತ್ತಾಪವುಳ್ಳ ವಿಶ್ವಾಸಿಗಳು ದೀಕ್ಷಾಸ್ನಾನದ ನೀರಿನಿಂದ ಮೇಲಕ್ಕೆ ಎದ್ದು ಬರುವಾಗ, ಅವರು "ಹೊಸಬರಾಗಿ ನಡಕೊಳ್ಳಲು" (ರೋಮಾ 6:4), "ಕ್ರಿಸ್ತನಲ್ಲಿ" ಹೊಸ ಸೃಷ್ಟಿಗಳಾಗಿ ಹೊರಗೆ ಬರುವರು. ಇದರರ್ಥವು ಏನೆಂದರೆ "ಪೂರ್ವಸ್ಥಿತಿ ಹೋಗಿ[ರುತ್ತವೆ]" ಮತ್ತು "ಎಲ್ಲಾ ನೂತನವಾಯಿತು" ಎಂದಾಗಿದೆ (2 ಕೊರಿಂಥ 5:17). (4) ನೋಹ ಮತ್ತು ಆತನ ಕುಟುಂಬದವರ ರಕ್ಷಣೆಯು ನೀರಿನ ರಕ್ಷಣೆಯಾಗಿರಲಿಲ್ಲ, ಅಂದರೆ, ನೀರು ಅಕ್ಷರಶಃ ಅವರನ್ನು ರಕ್ಷಿಸಲಿಲ್ಲ. ಆ ಜಲವು ಹಳೆಯ ಲೋಕವನ್ನು ಹೊಸ ಲೋಕದಿಂದ ವಿಭಜಿಸಿದ್ದಾಗಿತ್ತಷ್ಟೆ; ಮತ್ತು, ನಂಬಿಕೆಯಿಂದ ಅವರು ಆ ಜಲವನ್ನು ಹಾದುಕೊಂಡು ಬರಬೇಕಾಗಿತ್ತು. ಅದೇ ರೀತಿಯಲ್ಲಿಯೇ, ನೀರಿನ ದೀಕ್ಷಾಸ್ನಾನವು ಅಕ್ಷರಶಃ ಪಾಪಗಳನ್ನು ತೊಳೆಯುವದಿಲ್ಲಲ (1 ಪೇತ್ರ 3:21); ಅದು ಹಳೆಯ ಜೀವಿತ ಮತ್ತು ಕ್ರಿಸ್ತನಲ್ಲಿ ದೊರಕುವ ನೂತನ ಜೀವಿತಗಳ ನಡುವಿನ ವಿಭಜಕವಾಗಿರುತ್ತದೆ. ನಾವು ದೀಕ್ಷಾಸ್ನಾನದ ಜಲಸಮಾಧಿಯ ಮೂಲಕವಾಗಿ ಹಾದು ಬರುವ ವೇಳೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮತ್ತು ಆತನ ರಕ್ತದಲ್ಲಿರುವ ಶುದ್ಧೀಕರಿಸುವ ಶಕ್ತಿಯಿಂದ ಮಾತ್ರವೇ ನಮ್ಮ ಪಾಪಗಳನ್ನು ಶುದ್ಧೀಕರಿಸಬಲ್ಲದು (ಮತ್ತಾಯ 26:28; ಅಪೊಸ್ತಲರ ಕೃತ್ಯಗಳು 22:16; ರೋಮಾ 6:4-6).

(6) ನಾವೆಯೊಳಗಿಂದ ಹೊರಗೆ ಬಂದ ಬದುಕುಳಿದವರು ತಮ್ಮ ರಕ್ಷಣೆಗಾಗಿ ದೇವರಿಗೆ ಋಣಸ್ಥರಾಗಿದ್ದರು, ಯಾಕೆಂದರೆ ಅವರನ್ನು ರಕ್ಷಿಸಿ ಅವರಿಗೆ ಶುದ್ಧೀಕರಿಸಲ್ಪಟ್ಟ ಲೋಕವೊಂದರಲ್ಲಿನ ಹೊಸ ಜೀವಿತಕ್ಕಾಗಿ ಉತ್ತಮ ಮನಸ್ಸಾಕ್ಷಿಯನ್ನು ಕೊಟ್ಟಿದ್ದು ಆತನ ಕೃಪೆಯೇ ಆಗಿತ್ತು. ಹಾಗಿದ್ದರೂ, ಪಶ್ಚಾತ್ತಾಪವುಳ್ಳ ವಿಶ್ವಾಸಿಗಳು ಕ್ರಿಸ್ತನಲ್ಲಿ ದೀಕ್ಷಾಸ್ನಾನ

ಮಾಡಿಸಿಕೊಳ್ಳುವ ವೇಳೆ (ಗಲಾತ್ಯ 3:26, 27; ತೀತನು 3:4-7) ಕೃಪೆಯಿಂದ ನಂಬಿಕೆಯ ಮೂಲಕವೇ ರಕ್ಷಣೆ ಹೊಂದಿದವರಾಗಿದ್ದಾರೆ (ಎಫೆಸ 2:4-9). ಅವರು "ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ . . . ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳು"ತ್ತಾರೆ (1 ಪೇತ್ರ 3:21). (1 ಪೇತ್ರ 3:21). (7) ದೇವರು ಮಾನವರ ಮೇಲೆ ಮರಣಕ್ಕೆ ಪಾತ್ರರೆಂಬಂತೆ ಮತ್ತೊಂದು ಪ್ರಳಯದ ಮೂಲಕವಾಗಿ ನ್ಯಾಯತೀರಿಸುವದಿಲ್ಲ ಎಂದು ವಾಗ್ದಾನ ಮಾಡಿದನು. ಬದಲಾಗಿ, ಆತನು ಬಿತ್ತನೆಯ ಮತ್ತು ಸುಗ್ಗಿಯ ನಿಯತಕ್ರಮವಾದ ಕಾಲಗಳನ್ನು ಹೊಂದಿರುವ ಒಂದು ಹೊಸ ಲೋಕವನ್ನು ನೀಡಿ ಆಶೀರ್ವದಿಸಲು ದೃಢಸಂಕಲ್ಪ ಮಾಡಿಕೊಂಡನು, ಆ ಲೋಕದಲ್ಲಿ ಅವರು ಭೂಮಿಯ ಫಲವನ್ನು ಆನಂದಿಸಬಹುದಿತ್ತು. ಈ ದಿನ, ದೇವರು ತನ್ನ ಜನರನ್ನು ಕ್ರಿಸ್ತನಲ್ಲಿ ಹೊಸ ಜೀವವನ್ನು ಕೊಟ್ಟು ಆಶೀರ್ವದಿಸುತ್ತಾನೆ. ಕ್ರೈಸ್ತರು ಈಗ ಪವಿತ್ರಾತ್ಮನ ನೀತಿಯ ಫಲವನ್ನು ಆನಂದಿಸುತ್ತಾರೆ (ಗಲಾತ್ಯ 5:22, 23). ಪರಲೋಕದ ಪರದೈಸಿನಲ್ಲಿ, ನಂಬಿಗಸ್ತರಾಗಿ ಉಳಿಯುವವರು ಆತ್ಮೀಕ ಜೀವವೃಕ್ಷದಲ್ಲಿ ಪಾಲು ಹೊಂದುವರು, ಅದು "... ಹನ್ನೆರಡು ತರದ ಫಲಗಳನ್ನು ಕೊಡುತ್ತದೆ ... ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ" (ಪ್ರಕಟನೆ 22:2).

### "ತರುವಾಯ ದೇವರು ನೋಹನನ್ನು ... ನೆನಪಿಗೆ ತಂದುಕೊಂಡು" (8:1)

*ದೇವರ ಕರುಣೆ.* ದೇವರು ನೋಹನನ್ನು ನೆನಪಿಸಿಕೊಂಡು ಕರುಣೆಯಿಂದ ನಡೆದುಕೊಂಡನು. ನಾವೆಯು ತಿಂಗಳುಗಟ್ಟಲೆ ಸಮುದ್ರದ ಮೇಲೆ ಕಾಲವನ್ನು ಕಳೆದ ನಂತರದಲ್ಲಿ, ಯೆಹೋವನು ತನ್ನ ದೈವಿಕ ಕಾಳಜಿ ಮತ್ತು ನಂಬಿಗಸ್ತಿಕೆಯನ್ನು ನೋಹನಿಗೆ ಮತ್ತು ನಾವೆಯಲ್ಲಿದ್ದ ಇತರರಿಗೆ ತೋರಿಸುವವನಾಗಿ ನೀರು ತಗ್ಗುವಂತಾಗಲು ಭೂಮಿಯ ಮೇಲೆ ಬಲವಾದ ಗಾಳಿಯನ್ನು ಬರಮಾಡಿದನು. ಅದರ ಜೊತೆಗೆ, ಭೂಮಿಯ ಮೇಲೆ ಇನ್ನು ಮೇಲೆ ನೀರು ಸೇರದ ಹಾಗೆ, ಆತನು "ಭೂಮಿಯ ಕೆಳಗಿರುವ ಸಾಗರದ ಸೆಲೆಗಳನ್ನು" ನಿಲ್ಲಿಸಿದನು ಮತ್ತು "ಆಕಾಶದ ತೂಬುಗಳೂ ಮುಚ್ಚಿಹೋಗುವಂತೆ" ಮಾಡಿದನು (8:1-5). ದೇವರ ಈ ಕರುಣೆಭರಿತ ಕ್ರಿಯೆಯು ನಾವೆಯಲ್ಲಿದ್ದವರಿಗೆ ಒಂದು ತಿರುವು ಕೊಟ್ಟ ಸಂಗತಿಯಾಗಿತ್ತು. ಅವರು ಬದುಕುಳಿಯುವದಕ್ಕಾಗಿ ನಡಿಸಿದ ನಾಶಕರವಾದ ಹೋರಾಟದ ಮಧ್ಯದಲ್ಲಿ, ಯೆಹೋವನು ಅವರಿಗೆ ಜಲಸಮೂಹಗಳು ಕ್ರಮೇಣದಲ್ಲಿ ತಮ್ಮ ವಿನಾಶಕಾರಿ ಕ್ರಿಯೆಯನ್ನು ನಿಲ್ಲಿಸುವವು ಎಂಬ ನಿರೀಕ್ಷೆಯನ್ನು ಒದಗಿಸಿದನು. ಸಮುದ್ರವು ತಗ್ಗುತ್ತಿದ್ದದ್ದು ಮಾತ್ರವೇ ಆಗಿರಲಿಲ್ಲ, ಆದರೆ ನಾವೆಯು - ಅನೇಕ ತಿಂಗಳುಗಳ ಬಳಿಕ - ಬೆಟ್ಟದ ಮೇಲೆ ಬಂದು ಸಹ ನಿಂತಿತ್ತು. ಹತ್ತನೆಯ ತಿಂಗಳಿನ ಮೊದಲನೆಯ ದಿನದಲ್ಲಿ, ಆ ಕ್ಷೇತ್ರದಲ್ಲಿದ್ದ ಬೇರೆ ಬೆಟ್ಟಗಳ ತುದಿಗಳು ನೀರಿನ ಗೋಚರಿಸುತ್ತಿದ್ದವು (8:4, 5). ಇದೆಲ್ಲವೂ ನಾವೆಯಲ್ಲಿದ್ದವರನ್ನು ಜಲಸಮಾಧಿಯೊಳಗಿಂದ ತಪ್ಪಿಸಿ ಕಾಪಾಡುವೆನೆಂಬ ತನ್ನ ವಾಗ್ದಾನದಲ್ಲಿ ಯೆಹೋವನು ನಂಬಿಗಸ್ತನಾಗಿದ್ದಾನೆ ಎಂಬುದನ್ನು ದೃಢೀಕರಿಸಿತ್ತು.

ಯಾಹುವು ನೋಹ ಮತ್ತು ಆತನ ಕುಟುಂಬಕ್ಕೆ ನೀಡಿದ್ದ ತನ್ನ ವಾಗ್ದಾನದಲ್ಲಿ ನಂಬಿಗಸ್ತನೆಂಬುದನ್ನು ಸಾಭಿತುಪಡಿಸಿದನು. ಯೆಹೂದ್ಯರ ಅನಂತರದಲ್ಲಿನ ಇತಿಹಾಸದಲ್ಲಿ, ದೇವರ ಜನರ ನಂಬಿಕೆಯು ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳಲ್ಲಿ ನಂಬಿಗಸ್ತನಾಗಿದ್ದನೆಂಬುದರ ಮೇಲೆ ಆಧಾರವಾಗಿತ್ತೆಂದು ಘೋಷಿಸಲ್ಪಡುತ್ತದೆ (ಧರ್ಮೋಪದೇಶಕಾಂಡ 7:9; ಕೀರ್ತನೆ 36:5; 40:10; ಯೆಶಾಯ 49:7; ಪ್ರಲಾಪ 3:22-26).

ಕೀರ್ತನೆ 89ರಲ್ಲಿ ಹಳೆಯ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಇಲ್ಲದಷ್ಟು ಸಾರಿ ಯೆಹೋವನ ನಂಬಿಗಸ್ತಿಕೆಯನ್ನು ಹಾಡಿ ಹೊಗಳಲಾಗಿದ್ದು (89:1, 2, 5, 8, 24, 33, 49 ವಚನಗಳಲ್ಲಿ ಏಳು ಸಾರಿ), ಇದರಲ್ಲಿ ಕೀರ್ತನೆಗಾರನು ತನಗಿದ್ದ ದೈವಜ್ಞಾನವನ್ನು ಬಾಬೆಲಿನಲ್ಲಿದ್ದ ಕಠೋರ ವಾಸ್ತವಿಕತೆಯೊಂದಿಗೆ ಸಂಧಾನ ಪಡಿಸಿಕೊಳ್ಳಲು ಕಷ್ಟಪಟ್ಟನು. ಆತನ ಮನಸ್ಸನಲ್ಲಾದರೋ ಅವನ "ಕಿರೀಟ"ವನ್ನು ಮತ್ತು "ಸಿಂಹಾಸನವನ್ನು" "ನೆಲಕ್ಕೆ ಹಾಕುವ" ಮೂಲಕ ದೇವರು ದಾವೀದನ ರಾಜವಂಶದವರೊಂದಿಗೆ "ಒಡಂಬಡಿಕೆಯನ್ನು ಭಂಗಪಡಿಸಿದ್ದಾನೆ" ಎಂದಾಗಿತ್ತು (ಕೀರ್ತನೆ 89:39, 44). ಯೆಹೋವನ "ಅಭಿಷಿಕ್ತನ" (ಅರಸ) ಸೈನ್ಯಗಳು ಸೋಲಿಸಲ್ಪಟ್ಟಿದ್ದವು ಮತ್ತು ಅವಮಾನಕ್ಕೊಳಪಡಿಸಲ್ಪಟ್ಟಿದ್ದವು, ಮತ್ತು ಯೆರೂಸಲೇಮಿನ ಗೋಡೆಗಳು "ಕೆಡವಿ" ಹಾಕಲ್ಪಟ್ಟಿದ್ದವು (ಕೀರ್ತನೆ 89:38-40). ದೇವರು ತನ್ನ ಜನರಿಗೆ ಇಂಥ ದುರಂತವು ಸಂಭವಿಸುವಂತೆ ಹೇಗೆ ಅವಕಾಶ ಕೊಟ್ಟಿರುವದಕ್ಕೆ ಸಾಧ್ಯ ಎಂಬುದನ್ನು ಕೀರ್ತನೆಗಾರನು ಅರ್ಥಮಾಡಿಕೊಳ್ಳದ ಕಾರಣ, ಆತನು ಯೆಹೋವನ "ಕೃಪಾಕಾರ್ಯ" ("ಸ್ಥಿರವಾದ ಪ್ರೀತಿ"; NRSV) ಮತ್ತು "ಸತ್ಯತೆ" ಬಗ್ಗೆ ಪ್ರಶ್ನೆಯನ್ನು ಎತ್ತಿದನು (ಕೀರ್ತನೆ 89:49).

ದೇವರಿಗೆ ನಂಬಿಗಸ್ತನಾಗಿರಬೇಕೆಂದು ಜ್ಞಾಪಿಸುವಿಕೆ ಮತ್ತು ಜನಾಂಗದ ಮೇಲ ಸ್ವಾವಾನುಕಂಪದಲ್ಲಿ ಹೊರಳಾಡುವಿಕೆಯ ನಡುವೆ, ದೇವರು ತನ್ನ ವಾಗ್ದಾನಗಳಲ್ಲಿ ಹಿಂದಕ್ಕೆ ಹೋಗಿದ್ದಾನೆಂದು ಪರೋಕ್ಷವಾಗಿ ಹೇಳುವ ಮೂಲಕ ಕೀರ್ತನೆಗಾರನು ತಪ್ಪು ಮಾಡಿದ್ದನು. ಆತನು ತಪ್ಪು ಮಾಡಿದ್ದಾನೆಂಬುದು ಸ್ಪಷ್ಟವಾಗಿ ಕಾಣಿಸುತ್ತದೆ ಯಾಕೆಂದರೆ ಜನರು ಹೇಗೆ ಪ್ರತಿಕ್ರಿಯಿಸಿದರೂ ಸರಿಯೇ ತಾನು ಒಡಂಬಡಿಕೆಗೆ ನಂಬಿಗಸ್ತನಾಗಿರುತ್ತಾನೆ ಎಂಬುದನ್ನು ಒಂದು ಶರತ್ತುರಹಿತ ವಾಗ್ದಾನವಾಗಿ ಭಾವಿಸಿಕೊಳ್ಳಬೇಕೆಂಬುದು ದೇವರ ಉದ್ದೇಶವಾಗಿರಲೇ ಇಲ್ಲ, ಅನಂತರದಲ್ಲಿ ಇಸ್ರಾಯೇಲ್ಯರೊಳಗೆ ಅನೇಕರು ಹೀಗೆಯೇ ಅಂದುಕೊಳ್ಳುವವರಾದರಷ್ಟೆ. ಜನರು ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳನ್ನು ಆನಂದಿಸಬೇಕಾದರೆ, ಅವರು ದೇವರ ಒಡಂಬಡಿಕೆಗಳಿಗೆ ನಂಬಿಕೆ ಮತ್ತು ವಿಧೇಯತೆಗಳನ್ನು ತೋರಿಸುವದು ಯಾವಾಗಲೂ ಅಗತ್ಯವಿರುತ್ತದೆ.

ಇಸ್ರಾಯೇಲ್ಯರು ಅರಣ್ಯದಲ್ಲಿ ಹೆಚ್ಚುಕಡಿಮೆ ನಾಲ್ವತ್ತು ವರ್ಷಗಳ ಕಾಲ ಅಲೆದಾಡಿದ ನಂತರದಲ್ಲಿ ಮೋಶೆಯು ಅವರಿಗೆ ನೀಡಿದ ಸಂದೇಶಗಳಲ್ಲಿ ಈ ವಿಷಯವನ್ನು ಬಹಳ ಸ್ಪಷ್ಟವಾಗಿ ತಿಳಿಸಿದನು. ಜನರು ವಾಗ್ದಾನ ದೇಶವನ್ನು ಪ್ರವೇಶಿಸಿ ಅದನ್ನು ಸ್ವಾಧೀನಪಡಿಸಿಕೊಂಡ ಬಳಿಕ, ದೇವರ ಕೃಪೆಯು ತಮಗೆ ಏನೂ ಮಾಡಿದರೂ ಇದ್ದೇ ಇರುತ್ತದೆ ಬಿಡು ಎಂಬುದಾಗಿ ಭಾವಿಸಿಕೊಳ್ಳಕೂಡದು ಎಂಬುದಾಗಿ ಆತನು ಅವರನ್ನು ಮುಂದಾಗಿ ಎಚ್ಚರಿಸಿದನು. ವಿಗ್ರಹಾರಾಧನೆಯ ಕಡೆಗೆ ತಿರುಗಿಕೊಳ್ಳುವುದರಿಂದ ಅವರು ದೇಶವನ್ನು ಕಳೆದುಕೊಳ್ಳಬೇಕಾಗುತ್ತದೆ ಮತ್ತು ಜನಾಂಗಗಳ ಮಧ್ಯದಲ್ಲಿ ಚದುರಿಸಲ್ಪಡಬೇಕಾಗುತ್ತದೆ ಎಂದು ಅವರಿಗೆ ಹೇಳಿದನು (ಧರ್ಮೋಪದೇಶಕಾಂಡ 4:22-28; 6:10-15; 8:11-20; 11:1-17; 28:1-37; 30:15-20; 32:4, 5, 15-22, 44-47). ಸ್ಪಷ್ಟವಾಗಿ, ನಾವೆಯಲ್ಲಿದ್ದವರ ದೇವರಲ್ಲಿ ವಿಶ್ವಾಸವಿಟ್ಟು ಆತನ ಆಜ್ಞೆಗಳಿಗೆ ವಿಧೇಯರಾದರೂ ಸರಿಯೇ ಆಗದಿದ್ದರೂ ಸರಿಯೇ ಆತನು ಅವರನ್ನು ಆಶೀರ್ವದಿಸಿ ರಕ್ಷಿಸುವನು ಎಂಬುದಾಗಿ ನೋಹನು ಯೋಚಿಸಲಿಲ್ಲ. ಅವರು ನಾವೆಯೊಳಗೆ ದೀರ್ಘಕಾಲದ ವರೆಗೆ ಇದ್ದದರಿಂದಾಗಿ, ಇಸ್ರಾಯೇಲ್ಯರು ಅರಣ್ಯದಲ್ಲಿ ಗುಣಗುಟ್ಟಿದಂತೆಯೇ, ಇವರು ಗುಣಗುಟ್ಟಿದರು ಎಂಬುದಾಗಿ ವಾಕ್ಯವು ಯಾವದೇ ಸುಳಿವು ನೀಡುವದಿಲ್ಲ (ವಿಮೋಚನಕಾಂಡ 14:11, 12; 15:22-26; 16:1-

12; 17:1-7; 32:1-9; ಅರಣ್ಯಕಾಂಡ 11:1-9; 14:1-4).

*ನೋಹನ ವಿಶ್ವಾಸ.* ನೋಹನು ದೇವರಲ್ಲಿ ವಿಶ್ವಾಸವನ್ನಿಟ್ಟು ತಾಳ್ಮೆಯಿಂದ ಕಾದುಕೊಂಡಿದ್ದನು. ನಾವೆಯಲ್ಲಿದ್ದ ವಸತಿ ವ್ಯವಸ್ಥೆಗಳು ಆರಾಮದಾಯಕವಲ್ಲದೆಯೂ ಅನಾಗರೀಕ ಕಾಲದ ರೀತಿಯಲ್ಲಿಯೂ ಇದ್ದಿರಬಹುದಾಗಿದೆ, ಅದು ವಿಲಾಸಕ್ಕಾಗಿ ಅಲ್ಲ ಆದರೆ ಮಾನವ ಮತ್ತು ಪ್ರಾಣಿ ಜೀವಗಳನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಮಾತ್ರವೇ ವಿನ್ಯಾಶಿಸಲ್ಪಟ್ಟದ್ದಾಗಿತ್ತು. ಹೇಗೂ, ನೋಹನು ಸಮುದ್ರದಲ್ಲಿ ಸುದೀರ್ಘವಾದ ತಿಂಗಳುಗಳನ್ನು ಕಳೆಯಬೇಕಾಗಿ ಬಂದದರಿಂದ ಗುಣಗುಟ್ಟಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಯೆಹೋವನು ಸುಮಾರು ಒಂದು ವರ್ಷದಿಂದಲೂ ಆತನ ಸಂಗಡ ಮಾತಾಡಲಿಲ್ಲ ಎಂಬ ಕಾರಣಕ್ಕಾಗಿ ಯೆಹೋವನು ನನ್ನ ಕುಟುಂಬವನ್ನು ಕೈ ಬಿಟ್ಟಿದ್ದಾನೆಂದು ಸಹ ನೋಹನು ನಂಬಿಕೆಯನ್ನು ಕಳೆದುಕೊಳ್ಳಲಿಲ್ಲ ಅಥವಾ ಆರೋಪವನ್ನು ಮಾಡಲಿಲ್ಲ. ಅಷ್ಟುಮಾತ್ರವಲ್ಲದೆ, ನಾವೆಯು ಬೆಟ್ಟದ ಮೇಲೆ ಬಂದು ನಿಂತಾಗ ಸಹ ನೋಹನು ತಾಳ್ಮೆಯಿಲ್ಲದವನಾಗಿ ಅವಸರದಿಂದ ನಾವೆಯನ್ನು ಬಿಟ್ಟು ಇಳಿಯಲಿಲ್ಲ. ಆತನು ತನ್ನ ಕುಟುಂಬದ ಪರಿಸ್ಥಿತಿಗಳ ವಾಸ್ತವಾಂಶಗಳನ್ನು ಖಚಿತಪಡಿಸಿಕೊಳ್ಳಲು ವಿವಿಧ ವಿಧಾನಗಳನ್ನು ಬಳಕೆ ಮಾಡುತ್ತಿರುವ ವೇಳೆ ತಾಳ್ಮೆಯುಳ್ಳವನಾಗಿಯೂ ವಿಧೇಯತೆಯುಳ್ಳವನಾಗಿಯೂ ಇದ್ದನು.

ತಾವು ಯಾವ ಪರಿಸ್ಥಿತಿಯಲ್ಲಿದ್ದೇವೆಂಬುದನ್ನು ಪರೀಕ್ಷಿಸುವದಕ್ಕೆ, ನೋಹನು ಮೊದಲು ಒಂದು ಕಾಗೆಯನ್ನು ಹೊರಗೆ ಕಳುಹಿಸಿದನು, ಅದು ಹಾರಾಡುವನ್ನು ಮುಂದುವರೆಸಿತ್ತು ಮತ್ತು ನಾವೆಗೆ ಹಿಂದಿರುಗಿ ಬರಲಿಲ್ಲ. ತರುವಾಯ, ಒಂದು ವಾರ ಕಾಲದ ಬಿಡುವುಗಳನ್ನು ಕೊಡುವವನಾಗಿ, ಆತನು ಮೂರು ಸಾರಿ ಪಾರಿವಾಳವನ್ನು ಹೊರಗೆ ಕಳುಹಿಸಿದ್ದನು. ಎರಡನೆಯ ಸಾರಿ ಕಳುಹಿಸಿದ ವೇಳೆ, ಪಕ್ಷಿಯು ಒಂದು ಎಣ್ಣೇಮರದ ಎಲೆಯೊಂದಿಗೆ ಹಿಂದಿರುಗಿ ಬಂದಿತ್ತು; ಆದರೆ ಮೂರನೆಯ ಸಾರಿ ಅದು ಪುನಃ ನಾವೆಯ ಬಳಿಗೆ ಹಾರಿ ಬರಲಿಲ್ಲ. ನೀರು ಕಡಿಮೆಗೊಂಡಿದೆ ಎಂಬುದು ನೋಹನಿಗೆ ತಿಳಿಯಿತು ಮತ್ತು ಬಹುಶಃ ಭೂಮಿಯ ಮಾನವ ಜೀವ ಹಾಗೂ ಎಲ್ಲಾ ವಿಧವಾದ ಪ್ರಾಣಿ ಜೀವ ಎರಡಕ್ಕೂ ಪೋಷಣೆಯಾಗುವಷ್ಟರ ಮಟ್ಟಿಗೆ ಒಣಗಿರುತ್ತದೆಂಬ ನಿರ್ಣಯಕ್ಕೆ ಆತನು ಬಂದಿರಬಹುದು. ಹಾಗಿದ್ದರೂ, ಆತನು ಯಾವದೇ ವ್ಯಕ್ತಿ ಅಥವಾ ಪ್ರಾಣಿಗೆ ನಾವೆಯನ್ನು ಬಿಟ್ಟು ಹೋಗುವಂತೆ ಅನುಮತಿಸುವ ಮುನ್ನ ಯೆಹೋವನ ಆಜ್ಞೆಗೋಸ್ಕರ ತಾಳ್ಮೆಯಿಂದ ಕಾದುಕೊಂಡಿದ್ದನು.

ಆದಿಕಾಂಡದ ಲೇಖಕನು ತಾವು ಏಕೆ ಶುದ್ಧೀಕರಿಸಲ್ಪಟ್ಟಿರುವ ಹೊಸ ಲೋಕದೊಳಗೆ ತಮ್ಮ ಜೀವಿತಗಳನ್ನು ಮರುಸ್ಥಾಪಿಸಿಕೊಳ್ಳಲು ಹೊರಕ್ಕೆ ಹೋಗಕೂಡದು ಎಂಬ ತಮ್ಮ ಕುಟುಂಬದವರ ಪ್ರಶ್ನೆಗಳಿಗೆ ನೋಹನು ಎಷ್ಟು ಸಾರಿ ಉತ್ತರಿಸಬೇಕಾಗಿ ಬಂದಿತ್ತು ಎಂಬುದನ್ನು ತಿಳಿಸುವದಿಲ್ಲ. ಅವರು ನಾವೆಯೊಳಗೆ ಸೇರಿ ಹೆಚ್ಚುಕಡಿಮೆ ಒಂದು ವರ್ಷ ಕಾಲವಾಗಿತ್ತಾದ್ದರಿಂದ, ಎಲ್ಲಾ ನಿವಾಸಿಗಳು ತಮ್ಮ ಸೂಕ್ತವಾದ ನಿವಾಸಸ್ಥಾನಕ್ಕೆ ಹೋಗುವದಕ್ಕಾಗಿ ಸಮರ್ಪಕವಾದ ಸಮಯವನ್ನು ತಿಳಿಸುವಂತೆ ದೇವರ ಮಾರ್ಗದರ್ಶನಕ್ಕಾಗಿ ಕಾಯುತ್ತಿರುವ ವೇಳೆ ತಾಳ್ಮೆಯಿಂದ ಇರುವಂತೆ ಆತನು ಅವರಿಗೆಲ್ಲಾ ಪ್ರೋತ್ಸಾಹಿಸುತ್ತಾ ಇರಬೇಕಾಗಿತ್ತು ಎಂದು ಯೋಚಿಸುವುದು ಅತಿಯಾದ ಕಲ್ಪನೆಯೇನೂ ಆಗುವದಿಲ್ಲ (8:6-13).

ನಾವು ಹೊಸ ಆಕಾಶ ಮತ್ತು ಹೊಸ ಭೂಮಿಯೊಳಗೆ ಕರೆದೊಯ್ಯುವದಕ್ಕೆ ಆತನ ಅಂತಿಮ ಮಾತಿಗಾಗಿ ಕಾಯುತ್ತಿರುವ ವೇಳೆ, ಯೆಹೋವನು ಪ್ರತಿಯೊಂದು ಯುಗದಲ್ಲಿನ ತನ್ನ ಜನರಿಂದ ಇದೇ ವಿಧವಾದ ತಾಳ್ಮೆಯ ಕಾಯುವಿಕೆಯನ್ನು ಅಪೇಕ್ಷಿಸುತ್ತಾನೆ. ಪ್ರಥಮ

ಶತಮಾನದಲ್ಲಿ, ಯಾಕೋಬನು ಶ್ರೀಮಂತರಾದ ಹಾಗೂ ಶಕ್ತಿಶಾಲಿಯಾದ ಭೂಮಾಲೀಕರ ಕೈಗಳಲ್ಲಿ ದಬ್ಬಾಳಿಕೆಯನ್ನು ಅನುಭವಿಸುತ್ತಿದ್ದ ಯೆಹೂದಿ ಕ್ರೈಸ್ತರಿಗೆ ಹೀಗೆ ಈ ಕೆಳಗಿನ ಮಾತುಗಳಲ್ಲಿ ಬರೆಯುತ್ತಾನೆ: "ಸಹೋದರರೇ, ಕರ್ತನು ಪ್ರತ್ಯಕ್ಷನಾಗುವ ತನಕ ದೀರ್ಘಶಾಂತಿಯಿಂದಿರಿ. ವ್ಯವಸಾಯಗಾರನನ್ನು ನೋಡಿರಿ; ಅವನು ಭೂಮಿಯ ಬೆಲೆಯುಳ್ಳ ಫಲಕ್ಕಾಗಿ ಕಾದಿದ್ದು ಮುಂಗಾರು ಹಿಂಗಾರು ಮಳೆಗಳು ಬರುವ ತನಕ ದೀರ್ಘಶಾಂತಿಯಿಂದಿರುವನು" (ಯಾಕೋಬ 5:7). ಖಂಡಿತವಾಗಿಯೂ, ಬೀಜಗಳು ಚಿಗುರಿ ಗಿಡಗಳನ್ನುಂಟು ಮಾಡುವದಕ್ಕಾಗಿ ವ್ಯವಸಾಯಗಾರರು ಮಳೆಗೋಸ್ಕರ ಕಾಯುವುದು ಮಾತ್ರವೇ ಅಲ್ಲ, ಗಿಡಗಳು ತಮ್ಮ ಬೆಳೆಗಳನ್ನು ಉತ್ಪತ್ತಿಗೊಳಿಸುವಂತೆ ಮತ್ತು ಅದು ಪಕ್ವಗೊಂಡು ಕೊಯ್ಲಿಗೆ ಯೋಗ್ಯವಾಗುವ ತನಕ ಚಳಿಗಾಲ ಹಾಗೂ ವಸಂತ ಕಾಲಗಳುದ್ದಕ್ಕೂ ಕಾಯುವುದು ಸಹ ಅಗತ್ಯವಾಗಿತ್ತು. ಯೇಸುವು ಸುಗ್ಗಿಯನ್ನು "ಯುಗದ ಸಮಾಪ್ತಿ" ಎಂಬುದಾಗಿ ಗುರುತಿಸಿದನಾದ್ದರಿಂದ (ಮತ್ತಾಯ 13:39), ಹೊಸ ಒಡಂಬಡಿಕೆಯ ಲೇಖಕರು ತಮ್ಮ ಬುದ್ಧಿವಾದದ ಮಾತುಗಳಲ್ಲಿ ಈ ವಿಧವಾದ ಸಾದೃಶ್ಯವನ್ನು ಬಳಸುವುದು ಸರಿಯಾಗಿಯೇ ಇತ್ತು (ನೋಡಿರಿ 2 ತಿಮೊಥೆ 2:6, 8-10; 4:6-8). ಅದೇ ರೀತಿಯಲ್ಲಿಯೇ, ತಮ್ಮ ಹೊಸ ಲೋಕದೊಳಗೆ ಪ್ರವೇಶಿಸುವದಕ್ಕೆ ದೇವರು ನೇಮಿಸಿರುವಂಥ ಸಮಯದ ತನಕವೂ ನೋಹ ಮತ್ತು ಆತನ ಕುಟುಂಬದವರು ಕಾಯಬೇಕಾಗಿತ್ತು.

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಕಠಿಣವಾದ ಪರಿಸ್ಥಿತಿಗಳಲ್ಲಿ ಬದುಕುಳಿಯಲು ಹೋರಾಟವನ್ನು ನಡಿಸುತ್ತಿದ್ದ ಕ್ರೈಸ್ತರಿಗೆ ಒಂದು ಮಾದರಿಯಾಗಿ ನೋಹನ ನಂಬಿಕೆ ಹಾಗೂ ತಾಳ್ಮೆಯಿಂದ ನಿರೀಕ್ಷಿಸಿಕೊಂಡಿರುವಿಕೆಯನ್ನು ಬಳಸಿದನು (ಇಬ್ರಿಯ 11). ಆತನು ಹೇಳಿದ್ದೇನೆಂದರೆ "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ [ತಿರುಳು] ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ" (ಇಬ್ರಿಯ 11:1). ಭೂಮಿಯಲ್ಲಿ ಎಲ್ಲಾ ಕೆಟ್ಟತನ ಮತ್ತು ದುಷ್ಟತ್ವಗಳನ್ನು ಹೋಗಲಾಡಿಸಿ ಶುದ್ಧೀಕರಿಸಿದ ಬಳಿಕ ದೇವರು ಭೂಮಿಗೆ ಒಂದು ಹೊಸ ಆರಂಭವನ್ನು ಒದಗಿಸುವನು ಎಂಬುದು ನೋಹನ ನಂಬಿಕೆಯಾಗಿತ್ತು. ಆತನು ಅಂಥ ಒಂದು ಶುದ್ಧೀಕರಿಸಲ್ಪಟ್ಟ ಲೋಕವನ್ನು ಮುಂಚೆ ಎಂದಿಗೂ ನೋಡಿರಲಿಲ್ಲವಾದಾಗ್ಯೂ, ನೋಹನು ನಂಬಿಕೆಯಿಂದ ಕಾರ್ಯಶೀಲನಾಗುವದಕ್ಕೆ ಶಕ್ತನಾಗುವಂತೆ ಆತನ ನಂಬಿಕೆಯು ನೋಹನ ನಿರೀಕ್ಷೆಗೆ *ತಿರುಳ*ನ್ನು ಒದಗಿಸಿತ್ತು. ದೇವರು ತಾನು ವಾಗ್ದಾನ ಮಾಡಿದ್ದ ರೀತಿಯಲ್ಲಿಯೇ ಭೂಮಿಯ ಮೇಲೆ ಪ್ರಳಯವನ್ನುಂಟು ಮಾಡಿದ್ದರಲ್ಲಿ ತೋರಿ ಬಂದ ಆತನ ಪರಾಕ್ರಮ ಕ್ರಿಯೆಗಳನ್ನು ನೋಹನು ಈಗಾಗಲೇ ಕಣ್ಣಾರೆ ನೋಡಿದ್ದನು. ದೇವರ ಗತಕಾಲದ ಕ್ರಿಯೆಗಳು ನೋಹನು ತಾನು ಅನುಭವಿಸುವೆನೆಂದು ನಂಬಿಕೊಂಡಿದ್ದ ಹೊಸ ಸೃಷ್ಟಿಯೊಂದು ಭವಿಷ್ಯದಲ್ಲಿ ಫಲಿತಗೊಳ್ಳುವುದು ಎಂಬ ಖಾತ್ರಿಯನ್ನು ಒದಗಿಸಿತ್ತು; ಮತ್ತು "ಕಾಣದಿದ್ದ ಸಂಗತಿಗಳ ಸಂಗತಿ"ಗಳನ್ನು (ಇಬ್ರಿಯ 11:7) ಆನಂದಿಸುವ ನಿರೀಕ್ಷೆಯಲ್ಲಿ ಯೆಹೋವನಿಗೆ ವಿಧೇಯನಾಗುವದಕ್ಕೆ ಈ *ಪುರಾವೆ* ಒಂದೇ ಆತನಿಗೆ ಅಗತ್ಯವಾಗಿತ್ತು.

*ನೋಹನ ಕೃತಜ್ಞತಾಭಾವ.* ದೈವಿಕ ಆಜ್ಞೆಯನ್ನು ಕೇಳಿದ ಕೂಡಲೆ ನೋಹನು ಕೃತಜ್ಞತೆಯಿಂದ ಹೊರಗೆ ನಡೆದನು. ಸೂಕ್ತವಾದ ಕಾಲವು ಬಂದಾಗ, ದೇವರು ಮತ್ತೊಮ್ಮೆ ಮಾತಾಡಿದನು ಮತ್ತು ನಾವೆಯನ್ನು ಬಿಟ್ಟು ತನ್ನ ಕುಟುಂಬದೊಂದಿಗೆ ಹೊರಗೆ ಹೋಗುವಂತೆ ನೋಹನಿಗೆ ಹೇಳಿದನು. ಆತನು ತನ್ನೊಂದಿಗೆ ಸಕಲ ಪಕ್ಷಿಗಳನ್ನು, ಪ್ರಾಣಿಗಳನ್ನು, ಮತ್ತು ಕ್ರಿಮಿಕೀಟಗಳನ್ನು ಹೊರಗೆ ಕರೆದೊಯ್ಯಬೇಕಾಗಿತ್ತು, ಹೀಗೆ ಅವುಗಳು ಮತ್ತೊಂದಾವರ್ತಿ

ಭೂಮಿಯ ಮೇಲೆ ಅಭಿವೃದ್ಧಿಗೊಂಡು ಹೆಚ್ಚುವದಕ್ಕೆ ಸಾಧ್ಯವಾಗುತ್ತಿತ್ತು. ಪ್ರಳಯದ ಅಲ್ಲೋಲಕಲ್ಲೋಲವಾದ ಜಲಸಮೂಹಗಳಿಂದ ತನ್ನನ್ನು ಮತ್ತು ನಾವೆಯಲ್ಲಿದ್ದ ಸಕಲ ನಿವಾಸಿಗಳನ್ನು ರಕ್ಷಿಸಿ ಕಾಪಾಡಿದ್ದ ದೇವರ ಕರುಣೆ ಹಾಗೂ ಕೃಪೆಗಳಿಗೋಸ್ಕರ ನೋಹನು ಕೃತಜ್ಞತೆಯುಳ್ಳವನಾಗಿದ್ದನು. ತಾನು ಮತ್ತು ತನ್ನ ಕುಟುಂಬದವರು ತಪ್ಪಿಸಿ ಕಾಪಾಡಲ್ಪಟ್ಟಿದ್ದು ಆತನ ಚಾತುರ್ಯತೆ, ಪರಿಶ್ರಮಗಳು, ಅಥವಾ ಕ್ರಿಯೆಗಳ ಕಾರಣದಿಂದಲ್ಲ ಎಂಬುದು ಆತನಿಗೆ ಗೊತ್ತಿತ್ತು. ಅವರು ತಮ್ಮ ಪ್ರಾಣಗಳಿಗೋಸ್ಕರ ಸಂಪೂರ್ಣವಾಗಿ ದೇವರಿಗೆ ಋಣಸ್ಥರಾಗಿದ್ದರು. ಖಂಡಿತವಾಗಿಯೂ, ಅವರು ದೇವರು ಮಾರ್ಗದರ್ಶಿಸಿದ ರೀತಿಯಲ್ಲಿ ಸಿದ್ಧತೆಗಳನ್ನು ಮಾಡುವದಕ್ಕೆ, ನಾವೆಯನ್ನು ನಿರ್ಮಿಸುವದು, ಪ್ರಾಣಿಗಳನ್ನು ಕರೆ ತರುವುದು, ಮತ್ತು ಇತ್ಯಾದಿ ಕೆಲಸಗಳನ್ನು ಮಾಡುವದಕ್ಕೆ ಆತನಲ್ಲಿ ಸಾಕಷ್ಟು ವಿಶ್ವಾಸವನ್ನು ಇಡಬೇಕಾಗಿತ್ತು; ಆದರೆ ಅವರು ತಮ್ಮ ಜೀವಿತಗಳನ್ನು ಸಂಪೂರ್ಣವಾಗಿ ಯೆಹೋವನಿಗೆ ಸಮರ್ಪಿಸಿಕೊಂಡಿಲ್ಲವಾಗಿದ್ದರೆ ಇದ್ಯಾವದೂ ಸಾಕಾಗುತ್ತಿರಲಿಲ್ಲ.

ಈ ಮಹಾ ವಿಮೋಚನೆಗಾಗಿ ನೋಹನು ಸ್ವಾಭಾವಿಕವಾಗಿ ತೋರಿಸುವ ಪ್ರತಿಕ್ರಿಯೆ ಎಂದರೆ, ಕೃತಜ್ಞತಾಭಾವ ಮತ್ತು ಸ್ತುತಿಯಿಂದ ಕೂಡಿದವನಾಗಿ ಯೆಹೋವನಿಗೆ ಪಕ್ಷಿ ಹಾಗೂ ಪ್ರಾಣಿಗಳನ್ನು ಯಜ್ಞಗಳಾಗಿ ಅರ್ಪಿಸಿ ಆರಾಧಿಸುವದೇ ಆಗಿತ್ತು. ಶುದ್ಧ ಪ್ರಾಣಿಗಳು ಮತ್ತು ಪಕ್ಷಿಗಳೊಳಗೆ, ನೋಹನು ಸರ್ವಾಂಗಹೋಮಗಳನ್ನು ಆರಿಸಿಕೊಂಡನು. ಇವುಗಳು ಯಜ್ಞವೇದಿಯ ಮೇಲೆ ಸಂಪೂರ್ಣವಾಗಿ ಧಹಿಸಲ್ಪಡುತ್ತಿದ್ದವು. ಇಂದು ದೇವರು ತನ್ನ ಜನರಲ್ಲಿ ನೋಹನು ತೋರ್ಪಡಿಸಿದ ಅದೇ ಮನೋಭಾವವು ಇರಬೇಕೆಂದು ಬಯಸುತ್ತಾನೆ; ಆದರೆ ಈಗ, ಮೃತ ಪ್ರಾಣಿಗಳ ಬದಲಾಗಿ ಆತನು ಸಜೀವ ಯಜ್ಞಗಳನ್ನು ಅಪೇಕ್ಷಿಸುತ್ತಾನೆ. ಆತನು ಕ್ರಿಸ್ತನ ಮುಖಾಂತರವಾಗಿ ನಮಗೋಸ್ಕರ ಮಾಡಿರುವ ಕಾರ್ಯಕ್ಕಾಗಿ ಕೃತಜ್ಞತೆಯುಳ್ಳವರಾಗಿ, ನಾವು ನಮ್ಮ ಜೀವಿತಗಳನ್ನು ಅನುದಿನ ಮತ್ತು ಸಂಪೂರ್ಣವಾಗಿ ಆತನ ಸೇವೆಗೆ ಅರ್ಪಿಸತಕ್ಕದ್ದು (ರೋಮಾ 12:1, 2; ನೋಡಿರಿ ಇಬ್ರಿಯ 13:15, 16).

## ದೇವರು ಜ್ಞಾಪಿಸಿಕೊಳ್ಳುವಿಕೆ (8:1)

ಪಂಚಪುಸ್ತಕಗಳಲ್ಲಿ ಕೆಲವು ಸಾರಿ, ದೇವರು ವಿವಿಧ ರೀತಿಗಳಲ್ಲಿ ತನ್ನ ಕರುಣೆಗಳನ್ನು ತೋರಿಸುವವನೆಂದು ಬಣ್ಣಿಸುವಂಥ ಸನ್ನಿವೇಶಗಳಲ್ಲಿ זָכַר (*ಝಾಕಾರ*, "ಜ್ಞಾಪಿಸಿಕೋ") ಎಂಬ ಪದವು ಬಳಸಲ್ಪಡುತ್ತದೆ.

*ಆತನು ಭೂಮಿಯನ್ನು ಮತ್ತೊಂದು ವಿಶ್ವವ್ಯಾಪಿ ಪ್ರಳಯದಿಂದ ಕಾಪಾಡುವದರ ಮೂಲಕ ಮಾನವರ ಪರವಾಗಿ ನಡೆದುಕೊಂಡನು.* "ನಾನು ಭೂಲೋಕದ ಮೇಲೆ ಮೇಘಗಳನ್ನು ಕವಿಸುವಾಗ ಆ ಬಿಲ್ಲು ಮೇಘಗಳಲ್ಲಿ ಕಂಡು ಬರುವದು. ಆಗ ನಾನು ... ಪ್ರತಿಜ್ಞೆಯನ್ನು ಜ್ಞಾಪಕಮಾಡಿಕೊಳ್ಳುವೆನು. ಇನ್ನು ಮುಂದೆ ನೀರು ಹೆಚ್ಚಿ ಎಲ್ಲಾ ಭೂಪ್ರಾಣಿಗಳನ್ನು ಹಾಳುಮಾಡುವ ಪ್ರಳಯವಾಗುವದಿಲ್ಲ" (9:14, 15).

*ಆತನು ಅಬ್ರಹಾಮನ ವಿಜ್ಞಾಪನೆಗೆ ಪ್ರತಿಕ್ರಿಯೆಯಾಗಿ, ಲೋಟನಂತಹ ಕೆಲವೊಂದು ವ್ಯಕ್ತಿಗಳ ಪ್ರಾಣವನ್ನು ಉಳಿಸಿದನು.* "ದೇವರು ಆ ಸೀಮೆಯ ಪಟ್ಟಣಗಳನ್ನು ನಾಶಮಾಡಿದಾಗ ಲೋಟನು ವಾಸವಾಗಿದ್ದ ಊರುಗಳನ್ನು ಕೆಡವಿದರೂ ಅಬ್ರಹಾಮನನ್ನು ನೆನಸಿ ಲೋಟನನ್ನು ತಪ್ಪಿಸಿ ಕಾಪಾಡಿದನು" (19:29).

*ಆತನು ಬಂಜೆಯಾಗಿದ್ದ ರಾಹೇಲಳನ್ನು ಗರ್ಭತಿಯಾಗಿ ಯೋಸೇಫನಿಗೆ ಜನ್ಮ ನೀಡುವಂತೆ ಶಕ್ತಗೊಳಿಸಿದನು.* "ಆಮೇಲೆ ದೇವರು ರಾಹೇಲಳನ್ನು ನೆನಸಿಕೊಂಡು ಆಕೆಯ

ಮೊರೆಯನ್ನು ಕೇಳಿ ಆಕೆಗೆ ಮಕ್ಕಳಾಗುವಂತೆ ಮಾಡಿದನು" (30:22).

*ಆತನು ಇಸ್ರಾಯೇಲ್ಯರ ಕೂಗುಗಳಿಗೆ ಪ್ರತಿಕ್ರಿಯಿಸಿ ಅವರನ್ನು ಐಗುಪ್ತದ ದಾಸತ್ವದೊಳಗಿಂದ ಬಿಡಿಸಿದನು.* "ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡನು" (ವಿಮೋಚನಕಾಂಡ 2:24; ನೋಡಿರಿ 6:5; 32:13).

*ಇಸ್ರಾಯೇಲ್ಯರು ಕಾನಾನ್ ದೇಶವನ್ನು ಸ್ವಾಧೀನಪಡಿಸಿಕೊಳ್ಳುವ ವೇಳೆ ಆತನು ಅವರ ಸೈನ್ಯಕ್ಕೆ ನೆರವು ನೀಡಿದನು.* ದೇವರು ಮೋಶೆಗೆ ಹೀಗೆ ಹೇಳಿದನು, "ನೀವು ಸ್ವದೇಶವನ್ನು ಸೇರಿದ ಮೇಲೆ ನಿಮ್ಮನ್ನು ಉಪದ್ರವಪಡಿಸುವ ಶತ್ರುಗಳನ್ನು ಎದುರಿಸುವದಕ್ಕಾಗಿ ಯುದ್ಧಕ್ಕೆ ಹೊರಡುವಾಗ ಆ ತುತೂರಿಗಳನ್ನು ಆರ್ಭಟವಾಗಿ ಊದಿಸಬೇಕು. ಆಗ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಜ್ಞಾಪಕಕ್ಕೆ ತಂದುಕೊಂಡು ಶತ್ರುಗಳ ಕೈಯಿಂದ ಬಿಡಿಸುವನು" (ಅರಣ್ಯಕಾಂಡ 10:9).

*ಆತನು ತನ್ನ ಜನರಲ್ಲಿ ಪಶ್ಚಾತ್ತಾಪವುಳ್ಳ ಶೇಷ ಜನರು ತಮ್ಮ ಸೆರೆವಾಸದ ಬಳಿಕ ತಮ್ಮ ಸ್ವದೇಶಕ್ಕೆ ಹಿಂದಿರುಗುವರು ಎಂದು ವಾಗ್ದಾನ ಮಾಡಿದನು. ದೇವರು ಹೀಗೆ ಹೇಳಿದನು,*

> ನಾನು ಯಾಕೋಬ್ ಇಸಾಕ್ ಅಬ್ರಹಾಮ್ ಇವರಿಗೆ ಮಾಡಿದ ವಾಗ್ದಾನಗಳನ್ನು ನೆನಪಿಗೆ ತಂದುಕೊಂಡು ನೆರವೇರಿಸುವೆನು; ಅವರ ಸ್ವದೇಶವನ್ನೂ ನಾನು ದಯೆಯಿಂದ ಜ್ಞಾಪಿಸಿಕೊಳ್ಳುವೆನು ... ಆದರೂ ಅವರು ಶತ್ರುಗಳ ದೇಶದಲ್ಲಿರುವಾಗಲೂ ನಾನು ಅವರನ್ನು ಬೇಡವೆನ್ನುವದಿಲ್ಲ, ತಾತ್ಸಾರಮಾಡುವದಿಲ್ಲ; ನಾನು ಅವರಿಗೆ ಮಾಡಿದ ವಾಗ್ದಾನವನ್ನು ಮೀರುವದಿಲ್ಲ; ಅವರನ್ನು ಇಲ್ಲದಂತೆ ಮಾಡುವದಿಲ್ಲ; ನಾನು ಅವರ ದೇವರಾದ ಯೆಹೋವನಲ್ಲವೇ (ಯಾಜಕಕಾಂಡ 26:42-44).

## ದೇವರಿಂದಲೇ ಆಶೀವಾರ್ದಗಳು ಬಂದಿರುತ್ತವೆ, ಹೊರತು ವಿಗ್ರಹದಿಂದಲ್ಲ (8:22)

ಪ್ರಳಯದ ನಂತರ, ಭೂಮಿಯು ಯಾವಾಗಲೂ "ಬಿತ್ತನೆಯೂ ಕೊಯಿಲೂ, ಚಳಿಯೂ ಸೆಕೆಯೂ, ಬೇಸಿಗೆಕಾಲವೂ ಹಿಮಕಾಲವೂ, ಹಗಲೂ ಇರುಳೂ" ಇವುಗಳನ್ನು ಅನುಭವಿಸುವುದು ಎಂದು ದೇವರು ತನ್ನೊಳಗೆ ಹೇಳಿಕೊಂಡನು (8:22). ಈ ವಾಗ್ದಾನದ ಪ್ರಕಾರವಾಗಿ, ಲೋಕವು ಇರುವ ತನಕವೂ ಕಾಲಮಾನಗಳು ಮುಂದುವರೆಯುವವು.

ಸ್ವಾಭಾವಿಕ ಲಯಬದ್ಧ ಚಲನೆಯ ಕುರಿತಾಗಿ ಲೋಕದಲ್ಲಿನ ವಿಚಾರವು ಪ್ರಾಚೀನ ಮಧ್ಯಪ್ರಾಚ್ಯದಲ್ಲಿದ್ದ ಫಲವತ್ತತೆಯ ಧರ್ಮಗಳ ನಂಬಿಕೆಗಳಿಗೆ ವಿರುದ್ಧವಾಗಿರುತ್ತದೆ. ಮಿಥ್ಯ ದೇವರುಗಳ ಆರಾಧಕರು ಹೇಳಿದ್ದೇನೆಂದರೆ ಕಾಲಗಳಲ್ಲಿನ ಬದಲಾವಣೆಯು ಈ ದೇವರುಗಳ ಕ್ರಿಯೆಗಳ ಮೇಲೆ ಆಧಾರವಾಗಿತ್ತು ಎಂಬುದೆ, ಈ ದೇವರುಗಳನ್ನು ಮಾನವರ ಲೈಂಗಿಕ ಕೃತ್ಯಗಳಿಂದ ಮತ್ತು ಮಂತ್ರಗಳಿಂದ ಪ್ರೋತ್ಸಾಹಿಸುವದು ಅಗತ್ಯವಿತ್ತು. ಉದಾಹರಣೆಗೆ, ಕಾನಾನ್ಯರೊಳಗೆ ಬಾಳ್ ದೇವರು ಮರಣದ (ಮೊತ್ ದೇವರು) ವ್ಯಾಪ್ತಿಯೊಳಗೆ ಪ್ರವೇಶಿಸುವ ಮೂಲಕ ಮರಣ ಹೊಂದಿದ್ದನೆಂಬ ಕಾರಣಕ್ಕಾಗಿ ಚಳಿಗಾಲವು ಬರುವದಾಗಿತ್ತೆಂದು ಹೇಳಲಾಗಿರುತ್ತದೆ. ಅನಾಥ ದೇವತೆಯು ಬಾಳ್ ದೇವರಿಗಾಗಿ ಹುಡುಕಾಡಿ ಮೊತ್ ದೇವರನ್ನು ಸೋಲಿಸಿದ್ದಳು, ಮತ್ತು ಬಾಳ್ ದೇವರನ್ನು ಬಿಡುಗಡೆಗೊಳಿಸಿದ್ದ ಕಾರಣದಿಂದಾಗಿ ಶರತ್ಕಾಲವು ಬರುವದಾಗಿತ್ತೆಂದು ಅವರ ನಂಬಿಕೆಯಾಗಿತ್ತು. ಈ ಎರಡು ದೇವರುಗಳು ಲೈಂಗಿಕವಾಗಿ ಪುನಃ ಒಂದಾಗಿ ಬಾಳುವ ಸಾಮರ್ಥ್ಯವನ್ನು ಹೂಗಳು, ಮರಗಳು, ಬೆಳೆಗಳು, ಮಂದೆ, ಮತ್ತು ಹಿಂಡುಗಳಲ್ಲಿ, ಮಾತ್ರವಲ್ಲದೆ ಮಾನವರಲ್ಲಿ ಸಹ ಫಲವತ್ತತೆಯು ಪುನರುಜ್ಜೀವನಗೊಳ್ಳುವದಕ್ಕೆ

ಕಾರಣವಾಗಿದೆ ಎಂದು ಭಾವಿಸಲಾಗುತ್ತಿತ್ತು.

ಈ ವಿಧವಾದ ಧಾರ್ಮಿಕ ನಂಬಿಕೆಗಳು ಕಾನಾನ್ ದೇಶದಲ್ಲಿದ್ದ ಅನ್ಯಧರ್ಮಿಯ ದೇವಸ್ಥಾನಗಳೊಳಗೆ ಆರಾಧಕರು ಮತ್ತು ಪುರುಷ ಹಾಗೂ ಸ್ತ್ರೀ ಪಾಷಂಡ ವೇಶ್ಯೆಯರ ನಡುವೆ ಭ್ರಷ್ಟಗೊಂಡಿರುವ ಸ್ವಚ್ಛಂದ ಕಾಮಕೇಳಿಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದವು, ಇದೆಲ್ಲವೂ ಫಲವತ್ತತೆಯನ್ನು ಉಂಟಾಗುವಂತೆ ಮಾಡಬೇಕೆಂಬುದರ ಹೆಸರಿನಲ್ಲಿ ನಡೆಯುತ್ತಿತ್ತು. ಇಸ್ರಾಯೇಲ್ಯರ ಅನಂತರದ ಇತಿಹಾಸದಲ್ಲಿನ ದುರಂತವು ಏನಾಗಿತ್ತೆಂದರೆ ಅವರು ಪ್ರಳಯದ ನಂತರದಲ್ಲಿ ದೇವರು ನೋಹನಿಗೆ ಮಾಡಿದ್ದ ವಾಗ್ದಾನವನ್ನು ಮರೆತು ಬಿಟ್ಟಿದ್ದರು, ಮತ್ತು ಕಾನಾನ್ಯರ ಪುರಾಣಶಾಸ್ತ್ರಕ್ಕೆ ಬಲಿಯಾಗಿ ತಮ್ಮನ್ನು ಪಾಷಂಢತನದ ವಿಗ್ರಹಾರಾಧನೆಯಲ್ಲಿ ತೊಡಗಿಸಿಕೊಂಡಿದ್ದರು. ಜನರಲ್ಲಿ, ಪ್ರಾಣಿಗಳಲ್ಲಿ, ಮತ್ತು ಬೆಳೆಗಳಲ್ಲಿ ಫಲವತ್ತತೆ ಮತ್ತು ಉತ್ಪನ್ನವುಂಟಾಗಿ, ಸತ್ಯ ದೇವರು ಮೂಲತಃ ಆಜ್ಞಾಪಿಸಿದ್ದ ಪ್ರಕಾರವೇ ಅಭಿವೃದ್ಧಿಗೊಂಡು ಹೆಚ್ಚಿ ಭೂಮಿಯೆಲ್ಲೆಲ್ಲಾ ತುಂಬಿಕೊಂಡಿರುವದಕ್ಕೆ ಈ ಮಿಥ್ಯ ದೇವರುಗಳೇ ಕಾರಣವೆಂದು ಹೇಳುವವರಾದರು. ಸಮಸ್ತವನ್ನು ಉಂಟು ಮಾಡಿದ್ದ ಯೆಹೋವ ದೇವರು ಮಾತ್ರವೇ ತನ್ನ ಸೃಷ್ಟಿಯನ್ನು ಆಶೀರ್ವದಿಸಿ ಪೋಷಣೆ ಮಾಡಲು ಶಕ್ತನಾಗಿದ್ದಾನೆಂಬುದನ್ನು ಗ್ರಹಿಸಿಕೊಳ್ಳಲು ವಿಫಲರಾದರು.

ದೇವರು ತನ್ನ ಜನರು ಆತನನ್ನು ಸ್ತುತಿಸಿ ಆತನ ಪರಿಶುದ್ಧತೆಯನ್ನು ತಮ್ಮ ಜೀವಿತಗಳಲ್ಲಿ ಪ್ರತಿಬಿಂಬಿಸುವ ಮೂಲಕ ಅವನಿಗೆ ಮಹಿಮೆಯನ್ನುಂಟು ಮಾಡುವದಾದರೆ ಆತನು ಅವರಿಗೆ ಸಂತಾನಭಿವೃದ್ಧಿಯನ್ನು ಮತ್ತು ಸಕಲ ಒಳ್ಳೇ ಸಂಗತಿಗಳನ್ನು ನೀಡಿ ಆಶೀರ್ವದಿಸುವೆನೆಂದು ವಾಗ್ದಾನ ಮಾಡಿದನು (ಯಾಜಕಕಾಂಡ 18:21-30; 19:2, 29-31; 20:23, 24; ಧರ್ಮೋಪದೇಶಕಾಂಡ 11:1-17; 23:17, 18; 30:11-20). ಅವರು ಮಾಡಿಕೊಂಡ ಒಡಂಬಡಿಕೆಯಲ್ಲಿ ನಂಬಿಗಸ್ತರಾಗಿರುವದಕ್ಕೆ ಅವರು ವಿಫಲರಾದದ್ದು ಗಂಭೀರವಾದ ಪರಿಣಾಮಗಳನ್ನುಂಟು ಮಾಡಿತ್ತು.

---

ಅಡಿಟಿಪ್ಪಣಿಗಳು

[1]H. Eising, "זָכַר," in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1980), 4:64, 70–71. [2]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 383. ಮತ್ತಾಯನು ಪುನರಾವರ್ತನೆಗೊಂಡಿರುವ ಪದಗಳ ಒಂದು ಹೋಲಿಕೆ ಮಾಡಬಹುದಾದ ಪಟ್ಟಿಯೊಂದನ್ನು ನೀಡುತ್ತಾನೆ. [3]ಉದಾಹರಣೆಗೆ, ನೋಡಿರಿ John H. Walton, *Chronological and Background Charts of the Old Testament*, rev. and exp. (Grand Rapids, Mich.: Zondervan Publishing House, 1994), 14. [4]ಉದಾಹರಣೆಗೆ, ನೋಡಿರಿ Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 99. [5]Alfred J. Hoerth, *Archaeology and the Old Testament* (Grand Rapids, Mich.: Baker Books, 1998), 191. [6]7:11; 8:2ರಲ್ಲಿ "ಆಕಾಶದಲ್ಲಿ ತೂಬುಗಳು [ಕಿಟಕಿಗಳು]" ಎಂಬುದಕ್ಕೆ אֲרֻבָּה *(ರುಬ್ಬಾಹ)* ಎಂಬ ಬೇರೆ ಪದವೊಂದು ಬಳಸಲ್ಪಟ್ಟಿದೆ. [7]Bruce K. Waltkeನು ಅಭಿಪ್ರಾಯ ಪಟ್ಟದ್ದೇನೆಂದರೆ ದುರ್ಬಲವಾದ ಪಾರಿವಾಳಕ್ಕೆ ಮುಂಚೆ ಬಲಿಷ್ಠವಾಗಿದ್ದ ಕಾಗೆಯನ್ನು ಕಳುಹಿಸಲಾಯಿತು ಎಂಬ ಬೈಬಲ್ ತಿಳಿಸುವ ಚರಿತ್ರೆಯು, ದುರ್ಬಲ ಪಕ್ಷಿಯನ್ನು - ಕವಲು ಬಾಲದ ಹಕ್ಕಿಯಾದ ಪಾರಿವಾಳ, ಅನಂತರ ಕಾಗೆ - ಮೊದಲು ಕಳುಹಿಸಿದ್ದೆಂದು ಹೇಳುವಂತಹ ಬಾಬೆಲಿನ ಚರಿತ್ರೆಗಿಂತ ಉನ್ನತವಾದದ್ದು ಎಂಬುದೆ. (Bruce K. Waltke, *Genesis: A Commentary* [Grand Rapids, Mich.: Zondervan Publishers, 2001], 141; see *The Epic of Gilgamesh* 11.146–154.) [8]Victor P. Hamilton, *The Book of Genesis: Chapters 1—17*, The New International Commentary on the

Old Testament (Grand Rapids, Mich.: Wm. B. Eerdmans Publishing Co., 1990), 304–5. [9]Ibid., 304. [10]O. Kaiser, “חָרֶב,” in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1986), 5:151.

[11]Ralph H. Alexander, “יָבֵשׁ,” in *TWOT*, 1:360. ಇಸ್ರಾಯೇಲ್ಯರು ಕೆಂಪು ಸಮುದ್ರ ಮತ್ತು ಯೋರ್ದಾನ್ ನದಿಯನ್ನು ದಾಟುವ ವೇಳೆ ನಡೆದು ಹೋದ ಒಣನೆಲವನ್ನು ಸೂಚಿಸುವದಕ್ಕೆ *ಯಾಬೆಶ್* ಎಂಬ ಕ್ರಿಯಾಪದವು ಮತ್ತು ಸಂಬಂಧಿತ יַבָּשָׁה (*ಯಾಬ್ಬಾಶಾಹ*) ಎಂಬ ನಾಮಪದಗಳು ಬಳಲ್ಪಟ್ಟಿವೆ (ವಿಮೋಚನಕಾಂಡ 14:16, 22, 29; 15:19; ಯೆಹೋಶುವ 2:10; 4:22, 23; 5:1). *ಯಾಬ್ಬಾಶಾಹ* ಎಂಬ ಪದವು ಸೃಷ್ಟಿಯ ಚರಿತ್ರೆಯಲ್ಲಿನ “ಒಣನೆಲ” ಎಂಬುದನ್ನು ಸೂಚಿಸುವದಕ್ಕೆ ಸಹ ಕಾಣಿಸಿಕೊಳ್ಳುತ್ತದೆ (1:9, 10). [12]Hermann J. Austel, “מִשְׁפָּחָה,” in *TWOT*, 2:947. [13]G. Lloyd Carr, “עֹלָה,” in *TWOT*, 2:666–67. [14]“ಸುವಾಸನೆಯು ಗಮಗಮಿಸಿತು” ಎಂಬ ಪದಗುಚ್ಛವು ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಮತ್ತು ಯೆಹೆಜ್ಕೇಲ ಪುಸ್ತಕಗಳಲ್ಲಿ ದೇವರಿಗೆ ಮೆಚ್ಚಿಕೆಯಾದಂಥ ಯಜ್ಞಗಳ ವಿಷಯದಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ. [15]*The Epic of Gilgamesh* 11.160–161. [16]ಒಂದು ಬಟ್ಟೆಯ ವಿಷಯದಲ್ಲಿ ನಮೂನೆಯೊಂದು ಹೇಗೋ, ಒಂದು ಛಾಯೆಯು ಪಡಿಮಾದರಿಗೆ ಹಾಗೆಯೇ ಇರುತ್ತದೆ: ಒಂದು ನಮೂನೆಯು ಸಂಪೂರ್ಣಗೊಂಡ ಬಟ್ಟೆಗೆ ಛಾಯೆಯಾಗಿರುತ್ತದೆ. ಹೇಗೂ, ಬಟ್ಟೆಯು ತನ್ನ ನಮೂನೆಗಿಂತಲೂ ಶ್ರೇಷ್ಠವಾಗಿರುವಂತೆಯೇ, ನೋಹನು “ನೀರಿನ ಮೂಲಕವಾಗಿ” ಹೊಂದಿದ ರಕ್ಷಣೆಗಿಂತಲೂ (ಛಾಯೆ) ದೀಕ್ಷಾಸ್ನಾನವು (ಪಡಿಮಾದರಿ) ಶ್ರೇಷ್ಠವಾದದ್ದು.